ಇದರೊಳಗೆ ಮಹಿಷೂಸ್ ಎಂದರೆ ಯಾವನು ಒಕ್ಕಲಿಗ ಹಿಂದಿನಿಂದ ಒಕ್ಕಲುತನವನ್ನು ಮಾಡಿಕೊಂಡು ಬಂದಿದ್ದಾನೆ, ಯಾರು ಸ್ವತಃ ಭೂಮಿ ಉಳುತ್ತಾನೆ ಅಂತಹವನನ್ನು ಮಹಿಷೂಸ್ ಎಂದು ಕರೆಯುತ್ತೇವೆ. ಯಾರಿಗೆ ಒಕ್ಕಲುತನ ಇಲ್ಲ ಅಂತಹವನು ನಹಿ ಮಹಿಷೂಸ್. ಇಲ್ಲಿ ಒಕ್ಕಲುತನ ಎಂದರೆ ಉಳುವವನು ಎಂದು ತೋರಿಸಿ ಇದರಲ್ಲಿ ತಾರತಮ್ಯದಲ್ಲಿ ತೋರಿಸುತ್ತಿದ್ದೀರಿ ಇದು ನ್ಯಾಯಸಮ್ಮತವಾದ ಮಾತು ಅಲ್ಲವೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಈ ಸೀಲಿಂಗ್ಸ್ ಎಲ್ಲರ ಮೇಲೆ ತರುವುದನ್ನು ಬಿಟ್ಟು ಈ ವಕ್ಕಲಿಗನ ಮೇಲೆ ಮಾತ್ರ ಸೀಲಿಂಗ್ ಹಾಕುವುದು ನ್ಯಾಯವೇ? ಮಿತಿ ಬರಬೇಕು ಆದರೆ ಎಲ್ಲಾ ಉತ್ಪನ್ನದ ಮೇಲೆ ಮಿತಿ ತನ್ನಿ. ಭೂಮಿತಿ ಅನಿವಾರ್ಯ ಅದು ಒಪ್ಪತಕ್ಕ ಮಾತು. ಭೂಮಿ ಮೇಲೆ ಹಾಕಬೇಕು, ಭೂಮಿ ಮೇಲೆ ಹಾಕುವ ಕಾಲಕ್ಕೆ ೨ ತತ್ವ ಮುಂದೆ ಇಟ್ಟುಕೊಳ್ಳಬೇಕು. ಇವತ್ತು ಭೂಮಿ ಒಕ್ಕಲಿಗನ ಆಸ್ತಿ ಇದೆ, ಜೊತೆಗೆ ಉತ್ಪನ್ನ ಮಾರ್ಗ ಕೂಡ ಇದೆ. ಏತಕ್ಕಾಗಿ ಭೂಮಿ ಮೇಲೆ ಮಿತಿ? ಅದನ್ನು ಹಾಕುವಾಗ ದೇಶದ ಇತರ ಉದ್ಯೋಗಗಳ ಮೇಲೂ, ಆಸ್ತಿಗಳ ಮೇಲೂ ಮಿತಿ ಹಾಕಿ ಅಲ್ಲಿ ಎಷ್ಟು ಮಿತಿ ಹಾಕಿದ್ದಾರೆ ಆ ಮಿತಿ ಭೂಮಾಲೀಕರ ಮತ್ತು ಒಕ್ಕಲಿಗರ ಮೇಲೆ ಹಾಕಿದರೆ ನ್ಯಾಯವಾದ ಮಾತು ಮತ್ತು ಸರಿಯಾದ ಮಾತು ಆಗುತ್ತದೆ. ಈ ವಿಷಯದಲ್ಲಿ ಸರಿಯಾಗಿ ಒಕ್ಕಲಿಗನನ್ನು ರೆಪ್ರೆಸೆಂಟ್ ಮಾಡತಕ್ಕ ಜನ ಯಾರು ಇಲ್ಲ. ಆತನ ಪರವಾಗಿ ಯಾರಾದರೂ ಮುಂದೆ ಬಂದು, ಈ ಹೌಸಿನಲ್ಲಿ ಬಂದು ಕೂಡತಕ್ಕ ಸಾಮರ್ಥ್ಯವಿಲ್ಲ. ಬಹುತೇಕ ಈ ಸದನದಲ್ಲಿ ಬಂದಂತಹ ಯಾವ ಮನುಷ್ಯನೂ ಒಕ್ಕಲಿಗನ ರೆಪ್ರೆಸೆಂಟೇಟಿವ್ ಆಗಿ ಬಂದಿಲ್ಲ. ಬೇರೆ ವೃತ್ತಿಯಿಂದ ಬಂದಿದ್ದಾರೆ. ಬೇರೆ ಸೌಲತ್ತನ್ನು ಉಪಯೋಗಿಸಿಕೊಂಡು ಬಂದಿದ್ದಾರೆ. ಕೇವಲ ಒಕ್ಕಲುತನದ ಮೇಲೆ ಆಧಾರ ಆಗಿದೆಯೋ ಅಂತಹವನ ಪರಿಸ್ಥಿತಿ ಇವೊತ್ತು ಏನು? ಅವನನ್ನು ರೆಪ್ರೆಸೆಂಟ್ ಮಾಡತಕ್ಕ ಪರಿಸ್ಥಿತಿಯಲ್ಲಿ ಯಾರು ಇಲ್ಲ. ಯಾರು ಒಕ್ಕಲಿಗನನ್ನು ರೆಪ್ರೆಸೆಂಟ್ ಮಾಡತಕ್ಕ ಜನ ಎಂದು ಹೇಳುತ್ತಾರೋ ಅವರ ಉತ್ಪನ್ನ, ಅವರ ಆದಾಯ ಮಿತಿ ಆಗಿದ್ದು ಅವರಿಗೆ ಬೇರೆ ಯಾವುದು ಆದಾಯ ಇಲ್ಲದೇ ಇದ್ದಿದ್ದರೆ ಅವರು ಇಲ್ಲಿ ಬರಲಿಕ್ಕೆ ಸಾಧ್ಯವೇ ಇರಲಿಲ್ಲ. ಒಕ್ಕಲಿಗನ ಮುಖ್ಯವಾದ ಆದಾಯ ಎಂದರೆ ಅವನ ಭೂಮಿ ಮತ್ತು ಅವನ ಆಸ್ತಿ ಕೂಡ ಭೂಮಿಯೇ ಆಗಿದೆ. ಒಕ್ಕಲಿಗನ ಭೂಮಿಗೆ ಲಿಮಿಟ್ ಹಾಕುವ ಕಾಲಕ್ಕೆ ದೇಶದ ಸಮಸ್ತ ಆಸ್ತಿಗಳ ಮೇಲೆ ಮಿತಿ ಹಾಕಿ. ಸಮಸ್ತ ಆದಾಯದ ಮೇಲೆ ಮಿತಿ ಹಾಕಿ. ಇದನ್ನು ಬಿಟ್ಟು, ಬೇರೆ ಯಾರ ಮೇಲೂ ಹಾಕದೆ, ಇವನ ಮೇಲೆ ಮಾತ್ರ ಹಾಕಿದರೆ ಅದು ಸಮಂಜಸವಾದುದು ಮತ್ತು ನ್ಯಾಯವಾದುದು ಅಲ್ಲ. ಮಾನ್ಯಮಂತ್ರಿಗಳು ಹೇಳಿದರು ಎಲ್ಲಾ ಆಸ್ತಿಗಳ ಮೇಲೂ ಈ ಮಿತಿ ಬರುತ್ತದೆ ಎಂದು ಹೇಳಿದರು. ಎಲ್ಲವನ್ನೂ ಇಂಪ್ಲಿಮೆಂಟ್ ಮಾಡಬೇಕು ಎನ್ನುವ ಕಾಯಿದೆ ತನ್ನಿ. ಅರ್ಬನ್ ಸೀಲಿಂಗ್ ಹಾಕುವಾಗ ೨ ಲಕ್ಷ ಅರ್ಬನ್ ಸೀಲಿಂಗ್ ಹಾಕಿದರೆ ೨ ಲಕ್ಷದ ಮಿತಿಯನ್ನು ಒಕ್ಕಲಿಗನ ಆಸ್ತಿಮೇಲೂ ಜಾರಿಗೆ ತನ್ನಿ. ಒಕ್ಕಲಿಗನ ಆಸ್ತಿ, ಉತ್ಪನ್ನದ ಮೇಲೆ ಅಷ್ಟು ಮಿತಿ ಹಾಕಿ. ಒಕ್ಕಲಿಗನನ್ನು ರೆಪ್ರೆಸೆಂಟ್ ಮಾಡುವಂತಹವರು ಕೇವಲ ಒಕ್ಕಲುತನದ ಆಧಾರದ ಮೇಲೆ ಬಂದವರು ಯಾರಿದ್ದಾರೆ ಅವರು ಅವರಿಗೆ ಬೇರೆ ಆಧಾರವಿದ್ದು ಇಲ್ಲಿಗೆ ಬಂದಿದ್ದಾರೆ ಆದ್ದರಿಂದ ಪುನಃ ಒತ್ತಿ ಹೇಳುತ್ತೇನೆ ದೇಶಕ್ಕೆ ಅನ್ನವನ್ನು ಕೊಡತಕ್ಕ ಮನುಷ್ಯ ರೈತ, ದೇಶಕ್ಕೆ ಪ್ರತಿನಿತ್ಯ ಬೇಕಾಗಿರುವ ಅವಶ್ಯಕವಾದ ಆಹಾರವನ್ನು ಕೊಡತಕ್ಕ ಆತನ

ಮೇಲೆ ಎಲ್ಲಾ ರೀತಿಯ ಲಿಮಿಟೇಷನ್ಸ್ ಹಾಕುವುದು ನ್ಯಾಯಸಮ್ಮತವಲ್ಲ ಎಂದು ಹೇಳುತ್ತೇನೆ. ನೀವು ಸಮತಾವಾದದ ಕೂಗನ್ನು ಕೊಟ್ಟಿದ್ದೀರಿ, ಆ ಕೂಗಿಗೆ ಒಕ್ಕಲಿಗನನ್ನು ಆಹುತಿ ಮಾಡಬೇಡಿ ಮಿತಿ ಬೇಡ ಎನ್ನತಕ್ಕ ಮಾತನ್ನು ವಾದಮಾಡುತ್ತಾ ಇಲ್ಲ. ಇಷ್ಟು ಮಾಡುವಾಗ ಬೇರೆ ಎಲ್ಲಾ ಉದ್ಯೋಗಗಳ ಮೇಲೂ ಈ ಮಿತಿಯನ್ನು ಹಾಕಿ. ಅದು ಆಗದೆ ಹೋದರೆ ಎಷ್ಟು ಅನ್ಯಾಯ ಆಗುತ್ತದೆ ಎಂಬುದನ್ನು ತಿಳಿದುಕೊಂಡು ಅವನ ಮೇಲೆ ಈ ಭಾರ ಹೊರಿಸಿ. ಈ ಕಾನೂನಿನಲ್ಲಿ ಒಕ್ಕಲಿಗನ ಮೇಲೆ ಲಿಮಿಟ್ ಹಾಕಿದ್ದೀರಿ ಆ ಚೌಕಟ್ಟಿನಲ್ಲಿ ಎಲ್ಲರ ಮೇಲೂ ಒಂದು ಲಿಮಿಟ್ ತನ್ನಿ. ಇಲ್ಲದಿದ್ದರೆ ಒಕ್ಕಲಿಗನ ಮೇಲೆ ನಿರ್ಭಂಧ ಹಾಕಬೇಡಿ.

ಶ್ರೀ ಎಂ. ಎಸ್ ಕೃಷ್ಣನ್.—ಸೀಲಿಗ್ ಹಾಕಕೂಡದು ಎಂದು ತಮ್ಮ ಅಭಿಪ್ರಾಯವೇ ?

ಶ್ರೀ ವಿಶ್ವನಾಥರೆಡ್ಡಿ.—ಸೀಲಿಂಗ್ ಹಾಕಬೇಡಿ ಎಂದು ಹೇಳುತ್ತಿಲ್ಲ. ಆದರೆ ಅದನ್ನು ಎಲ್ಲರ ಮೇಲೂ ಸೀಲಿಂಗ್ ಹಾಕಿ ಸೈಮಲ್‌ಟೇನಿಯಸ್ಸಾಗಿ ಅದನ್ನು ಕಾರ್ಯರೂಪಕ್ಕೆ ತರಬೇಕೆಂದು ಹೇಳುತ್ತೇನೆ. ಕೂಲಂಕಷವಾಗಿ ಎಲ್ಲವನ್ನು ವಿಚಾರ ಮಾಡದೆ ಮಿತಿ ಹಾಕುತ್ತೇವೆ ಎಂದು ಹೇಳಿದರೆ ಹೇಗೆ ? ಕೆಲವು ಮಾತುಗಳನ್ನು ಮೊದಲನೆ ಆಕ್ಟ್‌ನಲ್ಲಿ ಇದ್ದದನ್ನು ಬದಲಿಸಿ ನಮ್ಮ ಮುಂದೆ ಇಟ್ಟಿದ್ದಾರೆ. ಎಷ್ಟು ಸೀರಿಯಸ್ ಆಗಿ ಸ್ಟಡಿ ಮಾಡಬೇಕೋ ಅಷ್ಟು ಸೀರಿಯಸ್ಸ್ ಆಗಿ ಸ್ಟಡಿ ಮಾಡದೆ ಆವಸರದಲ್ಲಿ ಅಮೆಂಡ್‌ಮೆಂಟ್ ತಂದ ಹಾಗೆ ಕಾಣುತ್ತದೆ. ಕ್ಲಾಸಿಫಿಕೇಷನ್ ಆಫ್ ಲ್ಯಾಂಡ್ಸ್ ಬಗ್ಗೆ ಈಗಾಗಲೇ ಶ್ರೀಮಾನ್ ಪುಟ್ಟಸ್ವಾಮಿಯವರು ಹೇಳಿದ್ದಾರೆ. ಕ್ಲಾಸಿಫಿಕೇಷನ್ ಬದಲಿಸಿ ಭೂಮಿ ಗುಣಧರ್ಮ, ಅದು ಬೆಳೆಯತಕ್ಕಂತ ಬೆಳೆ, ಜೊತೆಗೆ ಆವರೇಜ್ ರೇನ್ ಫಾಲ್ ಗಣನೆಗೆ ತೆಗೆದುಕೊಂಡು ವಿಚಾರ ಮಾಡಬೇಕು, ಆದನ್ನು ವಿಚಾರಮಾಡಿಲ್ಲ ಎಂದು ನನಗನಿಸುತ್ತದೆ

ಶ್ರೀ ಡಿ. ದೇವರಾಜ್‌ಅರಸ್.—ಹಿಂದೆ ಕಂದಾಯ ಹಾಕುವುದಕ್ಕೆ ಭೂಮಿ ಗುಣ ರೇನ್‌ಫಾಲ್, ಮಾರ್ಕೆಟಿಂಗ್ ಫೆಸಿಲಿಟೀಸ್ ತೆಗೆದುಕೊಂಡು ಸರ್ವೇ ಮಾಡಿದ್ದಾರೆ ಆ ಪ್ರಕಾರ ಮಾಡೋಣವೇ ?

ಶ್ರೀ ವಿಶ್ವನಾಥರೆಡ್ಡಿ.—ಹೇಗೆ ಎಂದು ಸೂಚಿಸುತ್ತೇನೆ. ರೇನ್‌ಫಾಲ್, ಭೂಮಿಗುಣ ತೆಗೆದು ಕೊಂಡರೆ ಕೆಲವೊಂದು ಭಾಗದಲ್ಲಿ ಕೆಲವೊಂದು ವ್ಯವಸಾಯಕ್ಕೆ ಯೋಗ್ಯವಾದ ಭೂಮಿ ಇದೆ.

ಶ್ರೀ ಡಿ. ದೇವರಾಜ್‌ಅರಸ್.—ಆ ರೀತಿ ಮಾಡೋಣವೇ ?

ಶ್ರೀ ವಿಶ್ವನಾಥರೆಡ್ಡಿ.—ಅದು ಒಂದು ಗಣನೆಗೆ ತೆಗೆದುಕೊಳ್ಳಬೇಕು. ಜೊತೆಗೆ ಆವರೇಜ್ ರೇನ್‌ಫಾಲ್ ತೆಗೆದುಕೊಳ್ಳಬೇಕು ಉದಾಹರಣೆಗೆ ಒಂದು ...

ಶ್ರೀ ಕೋಣಂದೂರು ಲಿಂಗಪ್ಪ.—ಡೀಟೇಲ್‌ಗೆ ಹೋಗುತ್ತಾ ಹೋದರೆ, ಪ್ರತಿ ಹೋಬಳಿ ಇಂಚು ಇಂಚುಗಳನ್ನು ನೋಡುತ್ತಾ ಹೋದರೆ ಇದು ಆಗಬಾರದು ಎನ್ನುವ ಅಭಿಪ್ರಾಯ ಬರುತ್ತದೆ.

ಶ್ರೀ ವಿಶ್ವನಾಥ ರೆಡ್ಡಿ.—ಕ್ಲಾಸಿಫಿಕೇಷನ್ ಆಫ್ ಲ್ಯಾಂಡ್ಸ್ ಬಗ್ಗೆ ಹೇಳುವುದಾದರೆ ಇದನ್ನು ಯಾವ ತತ್ವದ ಮೇಲೆ, ಯಾವ ತಳಹದಿಯ ಮೇಲೆ ಮಾಡಿದ್ದಾರೆ ಎಂದು ನನಗೆ ತಿಳಿಯದು. ಮೊದಲು ಲ್ಯಾಂಡ್ ರಿಫಾರಂಸ್ ಆಕ್ಟ್ ೧೯೬೧ರಲ್ಲಿ ಏನು ಮಾಡಿದ್ದಾರೆ. ಅದು ಸೂಕ್ತ ಇದೆ ಇಲ್ಲವೇ ಎನ್ನುವ ಮಾತನ್ನು ಹೇಳುವುದಿಲ್ಲ, ಆದರೆ ಅದರಲ್ಲಿ ಕೆಲವೊಂದು ಚೇಂಜಸ್ ಮಾಡಿ, ನಮ್ಮ ಸಮ್ಮುಖದಲ್ಲಿ ಈ ಬಿಲ್ಲಿನ ಶೆಡ್ಯೂಲ್ ಅನ್ನು ತಂದಿದ್ದಾರೆ. ಇದನ್ನು ಯಾವ ತಾತ್ವಿಕ ತಳಹದಿಯ ಮೇಲೆ ಹಾಕಿದ್ದಾರೆ ಎಂದು ನಾನು ಪ್ರಶ್ನಿಸುತ್ತೇನೆ. ಮೊದಲನೆಯ ಷೆಡ್ಯೂಲ್ ಪ್ರಕಾರ ಒಂದು ಎಕರೆ ಫಸ್ಟ್‌ಕ್ಲಾಸ್ ಲ್ಯಾಂಡ್ ಇದ್ದರೆ, ಕೊನೆಯ ಪಕ್ಷ ಏಳನೇ ವರ್ಗದ ಲ್ಯಾಂಡ್ ಎಂಟು ಎಕರೆ ಇರುತ್ತಿತ್ತು. ಮೊದಲನೆಯ ಆಕ್ಟಿನ ಪ್ರಕಾರ ಫಸ್ಟ್ ಕ್ಲಾಸ್ ಲ್ಯಾಂಡ್ ಒಂದು ಎಕರೆ ಇದ್ದರೆ ಸೆಕೆಂಡ್ ಕ್ಲಾಸ್ ಲ್ಯಾಂಡ್ ೧.೩೩, ಥರ್ಡ್ ಕ್ಲಾಸ್ ಲ್ಯಾಂಡ್ ೧.೬೬, ಫೋರ್ತ್ ಕ್ಲಾಸ್ ಲ್ಯಾಂಡ್ ೨ ಎಕರೆ. ಫಿಫ್ತ್ ಕ್ಲಾಸ್ ಲ್ಯಾಂಡ್ ನಾಲ್ಕು ಎಕರೆ, ಆರನೇ ವರ್ಗದ ಲ್ಯಾಂಡ್ ಆರು ಎಕರೆ, ಏಳನೇ ವರ್ಗದ ಲ್ಯಾಂಡ್ ಎಂಟು ಎಕರೆ. ಈಗಿನ ಅಮೆಂಡ್‌ಮೆಂಟ್ ಪ್ರಕಾರ ಫಸ್ಟ್ ಕ್ಲಾಸ್ ಲ್ಯಾಂಡ್ ೧ ಎಕರೆ ಎರಡನೆ ವರ್ಗದ ಲ್ಯಾಂಡ್ ೧.೫ ಎಕರೆ, ಮೂರನೆಯ ವರ್ಗದ ಜಮೀನು ೧.೮, ನಾಲ್ಕನೇ ವರ್ಗದ ಜಮೀನು ೨.೫, ಐದನೆಯ ವರ್ಗದ ಜಮೀನು ೩.೬, ಆರನೇ ವರ್ಗದ ಜಮೀನು ೪.೫, ಏಳನೆಯ ವರ್ಗದ ಜಮೀನು ೫.೪ ಎಕರೆ ಎಂದು ಇದೆ. ಇದರಲ್ಲಿ ಯಾವ ತಳಹದಿ, ಯಾವ ತತ್ವ ಅನುಸರಿಸಿದೆ ಎನ್ನುವುದು ಮಹತ್ವದ ಮಾತು. ಭೂಮಿಯನ್ನು ವಿಂಗಡಣೆ ಮಾಡುವ ಕಾಲಕ್ಕೆ ಎಷ್ಟು ಆದಾಯ ಬರುತ್ತದೆಯೋ ಆ ಒಂದು ಆದಾಯದ ಮೇಲೆ ಫಸ್ಟ್‌ಕ್ಲಾಸ್ ಜಮೀನು ಒಂದು ಎಕರೆ ಇದ್ದರೆ, ಏಳನೇ ವರ್ಗದಲ್ಲಿ ೫.೪ ಎಕರೆಯಲ್ಲಿ ಎಷ್ಟು ಬೆಳೆಯಬಹುದು ಎನ್ನುವುದನ್ನು ನೋಡಿಕೊಳ್ಳಬೇಕು.

(ಶ್ರೀ ವಿಶ್ವನಾಥರೆಡ್ಡಿ)

ಇಲ್ಲಿ ಯಾವ ತತ್ವವನ್ನು ಅನುಸರಿಸಿದಂತೆ ಕಾಣುವುದಿಲ್ಲ. ಕಾಂಗ್ರೆಸ್ ಹೈಕಮಾಂಡ್ ಪ್ರಕಾರ ೫೪ ಎಕರೆಗಿಂತ ಹೆಚ್ಚು ಮಿತಿಯನ್ನು ಇಡಬಾರದು ಎಂದು ಹೇಳಿದರು. ಅವರು ಒಂದು ಮಾತನ್ನು ಹೇಳಿದರೆ ಆ ಪಕ್ಷದ ಜನರಿಗೆ ವೇದ ವಾಕ್ಯವಾಗಬಹುದು. ದೇಶದಲ್ಲಿ ಒಂದು ಕಾನೂನನ್ನು ಮಾಡುವದರ ಕಾಲಕ್ಕೆ ಯಾರೇ ಒಬ್ಬರು ಏನು ಹೇಳುತ್ತಾರೆ, ಅದು ನ್ಯಾಯ ಸಮ್ಮತವಾಗುತ್ತದೆಯೋ ಎಂದು ನೋಡಬೇಕು. ಹತ್ತು ಎಕರೆ ಫಸ್ಟ್ ಕ್ಲಾಸ್ ಲ್ಯಾಂಡ್‌ನಲ್ಲಿ ಎಷ್ಟು ಉತ್ಪತ್ತಿ ತೆಗೆಯಬಹುದು, ಹತ್ತು ಎಕರೆಯ ಕಿಮ್ಮತ್ತು ಎಷ್ಟು ಆಗುತ್ತದೆ ಅದು ಲಾಸ್ಟ್ ಕ್ಲಾಸ್ ೫೪ ಎಕರೆ ಭೂಮಿಯಲ್ಲಿ ಬರತಕ್ಕ ಉತ್ಪತ್ತಿಗೆ ಸಮನಾಗುತ್ತದೆಯೋ ?

ಶ್ರೀ ಬಾಪೂಗೌಡರಾಯಪ್ಪ.—ಈಗ ಲಾಸ್ಟ್ ಕ್ಲಾಸ್ ಜಮೀನು ೫೪ ಎಕರೆಯೆಂದು ಫಿಕ್ಸ್ ಮಾಡಿದ್ದಾರೆ. ೧೫ ವರ್ಷದ ಹಿಂದಿನ ಫರ್ಟಲಿಟಿ ಆಧಾರದಮೇಲೆ ಮಾಡಬೇಕು, ಹೊಸದಾಗಿ ೪-೫ ವರ್ಷಗಳಿಂದ ಚಿತ್ರಿರತಕ್ಕ ಉತ್ಪತ್ತಿ ನೋಡಿಕೊಂಡು ಲ್ಯಾಂಡ್ ಸೀಲಿಂಗ್ ಮಾಡುವುದು ಅಲ್ಲ.

ಶ್ರೀ ಕೋಣಂದೂರು ಲಿಂಗಪ್ಪ —ಆ ರೀತಿ ಕಾಗ್ರೇಸ್ ಹೈಕಮಾಂಡ್‌ನವರು ಸೀಲಿಂಗ್ ಮಾಡಿದ್ದಾರೆ. ಫ್ಯಾಮಿಲಿ ಡೆಫಿಷನ್ನಿನಲ್ಲಿ ಜಮೀನ್ದಾರರನ್ನು ನಮ್ಮೊಂದಿಗೆ ರಕ್ಷಣೆ ಮಾಡಿದ್ದಾರೆ. ನೀವು ಭಯ ಪಡಬೇಕಾದುದು ಇಲ್ಲ.

ಶ್ರೀ ಡಿ. ದೇವರಾಜ ಅರಸ್.—ಇನ್ನೊಂದು ವಿಚಾರ ಏನು ಅಂದರೆ, ೫೪ ಎಕರೆ ಮಿತಿ ಅಂದರೆ, ೫೪ ಎಕರೆಯನ್ನೂ ಕೊಡಬೇಕು ಎಂದು ಅಲ್ಲ. ಲಾಸ್ಟ್ ಕ್ಲಾಸ್ ಲ್ಯಾಂಡ್ ಏನು ಇದೆ ಅದನ್ನು ೫೪ ಎಕರೆ ಎಂದು ಇಟ್ಟುಕೊಳ್ಳಿ. ಖುಷ್ಕಿ ಜಮೀನು ೫೪ ಎಕರೆ ಎಲ್ಲರಿಗೂ ಕೊಟ್ಟು ಬಿಡಿ ಎಂದಲ್ಲ.

ಶ್ರೀ ವಿಶ್ವನಾಥರೆಡ್ಡಿ —ಅಧ್ಯಕ್ಷರೇ, ನಾನು ಹೇಳುವುದು ಇಷ್ಟೆ, ಯಾವ ಆಧಾರದ ಮೇಲೆಯೂ ಕ್ಲಾಸಿಫಿಕೇಷನ್ ಆಫ್ ಲ್ಯಾಂಡ್ಸ್ ಅನ್ನು ಮಾಡಿಲ್ಲ. ಹೆಚ್ಚು ಕಡಿಮೆ ಮಾಡಿಬಿಟ್ಟರೆ ಒಂದು ತತ್ವದ ಮೇಲೆ ಮಾಡಿದಂತಾಗುತ್ತದೆಯೋ ? ಬಹುತೇಗ, ನಾನು ಒಂದು ಕಾಂಟ್ರಡಿಕ್ಟರಿ ಸ್ಟೇಟ್‌ಮೆಂಟ್ ಮಾಡುತ್ತೇನೆ ಎಂದು ಮಾತು ಬರಬಹುದು ನೀವು ಖುಷ್ಕಿ ಜಮೀನಿನ ಮೇಲೆ ೫೪ ಎಕರೆ ಮಿತಿ ಮಾಡಬೇಕು ಎನ್ನುವ ಇಚ್ಛೆ ಇದ್ದರೆ, ಏಳನೇ ವರ್ಗದ ೫೪ ಎಕರೆಯಲ್ಲಿ ಎಷ್ಟು ಉತ್ಪತ್ತಿ ಬರುತ್ತದೆ, ಅದೇ ಒಂದು ಫಸ್ಟ್ ಕ್ಲಾಸ್ ಲ್ಯಾಂಡ್ ಹತ್ತು ಎಕರೆಯಲ್ಲಿ ಎಷ್ಟು ಉತ್ಪನ್ನ ಬರುತ್ತದೆ, ಅದಕ್ಕನುಗುಣವಾಗಿ ಮಿತಿಯನ್ನು ನಿಗದಿ ಮಾಡಬೇಕು ಈಗ ೫೪ ಎಕರೆ ಎಂದು ಮಾಡಿರುವುದು ನ್ಯಾಯವಾದ ಲಿಮಿಟ್ ಅಲ್ಲ. ಕೊನೆಯ ಪಕ್ಷ ಫಸ್ಟ್ ಕ್ಲಾಸ್ ಭೂಮಿಗೆ ಏನು ಮಿತಿ ಕೊಡುತ್ತಾರೋ ಅದರ ಒಂದು ರೇಷಿಯೋ ಪ್ರಕಾರ ಏಳನೇ ವರ್ಗದ ಭೂಮಿಗೆ ಮಿತಿ ಹಾಕಬೇಕು. ಮೊದಲನೆಯ ಆಕ್ಟ ಪ್ರಕಾರ, ಒಂದು, ಎರಡು, ಮೂರು ನಾಲ್ಕನೆ ವರ್ಗಗಳಿಗನುಸಾರವಾಗಿ, ೧, ೧·೩೩, ೧·೬೬ ಮತ್ತು ೨· ಎಕರೆ ರೇಷಿಯೋ ಇತ್ತು. ಈ ತಿದ್ದುಪಡಿಯ ಪ್ರಕಾರ ೧, ೧·೫, ೧·೮ ಮತ್ತು ೨·೫ ರೇಷಿಯೋ ಇಟ್ಟಿದ್ದಾರೆ. ಮೊದಲನೆಯ ಆಕ್ಟ ಪ್ರಕಾರ ಫಸ್ಟ್ ಕ್ಲಾಸ್ ಲ್ಯಾಂಡ್ ೧·೩೩ ರೇಷಿಯೋ ಇಟ್ಟುಕೊಂಡರೆ, ಈಗಿನ ಆಕ್ಟ ಪ್ರಕಾರ ೧·೫, ಮಾಡಿದ್ದಾರೆ. ಆದರಲ್ಲಿ ೧·೬೬ ಇದ್ದರೆ ಇದರಲ್ಲಿ ೧·೮ ಕೊಟ್ಟಿದ್ದಾರೆ: ಇಲ್ಲಿ ರೇಷಿಯೋ ಹೆಚ್ಚು ಮಾಡಿದ್ದಾರೆ. ಹಳೆಯ ಆಕ್ಟ ಪ್ರಕಾರ ಎರಡು ಎಕರೆ ಇದ್ದರೆ. ಇದರಲ್ಲಿ ೨·೫ ಮಾಡಿದ್ದಾರೆ. ಮುಂದೆ ಐದು, ಆರು ಮತ್ತು ಏಳನೆಯ ವರ್ಗದ ಜಮೀನುಗಳಿಗೆ ರೇಷಿಯೋ ಕಡಿಮೆ ಮಾಡಿದ್ದಾರೆ. ಏಳನೆಯ ವರ್ಗದ ಜಮೀನಿಗೆ ೫೪ ಎಕರೆ ಮಿತಿಯನ್ನು ಮೇಲಿನವರು ಹೇಳಿದ್ದಾರೆ ಎಂದು ಇವರ ಕುತ್ತಿಗೆ ಕೊಯ್ಯುತಕ್ಕ ಮಾತನ್ನು ಇಲ್ಲಿಯೂ ತಂದಿದ್ದಾರೆ. ಇದನ್ನು ತಾತ್ವಿಕ ದೃಷ್ಟಿಯಿಂದ ಇಟ್ಟುಕೊಳ್ಳದೆ ಹೆಚ್ಚು ಕಡಿಮೆ ಮಾಡೋಣ ಎನ್ನುವ ದೃಷ್ಟಿಯಿಂದ ಮಾಡಿದ್ದಾರೆ. ಇಷ್ಟು ಹಗುರವಾಗಿ ಮಾಡತಕ್ಕ ಕಾನೂನು ಇದಲ್ಲ, ವಿಚಾರ ಮಾಡಿ ಸೈಂಟಿಫಿಕ್ ಬೇಸಿಸ್ ಮೇಲೆ, ಒಂದು ತತ್ವದ ತಳಹದಿಯ ಮೇಲೆ ಮಾಡಬೇಕು. ಒಂದು ಪಕ್ಷ ಭೂಮಿ ಹೆಚ್ಚು ಸಿಕ್ಕುವುದಿಲ್ಲ, ೧೦ ಎಕರೆಗಿಂತ ಹೆಚ್ಚು ಕೊಡುವುದಿಲ್ಲ ಎಂದು ಹೇಳಿದರೆ, ಒಂದು ತಳಹದಿ ಇದಕ್ಕೆ ಇರುತ್ತದೆಯೋ ? ಆದ್ದರಿಂದ ಒಂದು ತತ್ವದ ತಳಹದಿಯ ಮೇಲೆ, ಆದಾಯದ ತಳಹದಿಯ ಮೇಲೆ ಇದನ್ನು ಸರಿ ಮಾಡುವುದು ಒಳ್ಳೆಯದು. ದೇಶವನ್ನು ಆಳತಕ್ಕ ಜನ ಒಂದು ತತ್ವವನ್ನು ದೃಷ್ಟಿಯಲ್ಲಿಟ್ಟುಕೊಳ್ಳದೆ ಹೋದರೆ, ಇವರು ದೇಶಕ್ಕೆ ಸುಗಮವಾದ ರಾಜ್ಯ ಕೊಡಲಾರರು ಎಂದು ತಿಳಿದುಕೊಳ್ಳಬೇಕು. ಈ ದೃಷ್ಟಿಯಿಂದ ಲಿಮಿಟೇಷನ್ ಹಾಕುವ ಕಾಲಕ್ಕೆ ಈ ರೇಷಿಯೋ ಇಟ್ಟುಕೊಂಡು "ಫಿಕ್ಸ್ ಮಾಡಬೇಕು" ಬೇರೆಯ ರಾಜ್ಯದವರು ಏನು ಮಿತಿ ಹಾಕುತ್ತಾರೆ ಅದನ್ನು ನೋಡಿಕೊಂಡು ಇಲ್ಲಿ ಮಿತಿ ಹಾಕಬೇಕು.

ಇನ್ನು ಕಾಂಪನ್ಸೇಷನ್ ಬಗ್ಗೆ ಹೇಳುತ್ತೇನೆ. ಭೂಮಿಯ ಮೇಲೆ ಕಾಂಪನ್ಸೇಷನ್ ಎಷ್ಟು ಕೊಡು ತ್ತಾರೆ ಎಂದು ಇದೆ.

4–30 P. M.

ಅಧ್ಯಕ್ಷರ ಮೂಲಕ ವಿನಂತಿ ಮಾಡುವುದು ಯಾವ ತತ್ವದಮೇಲೆ ನಾನು ಹೇಳುತ್ತೇನೆಂಬುದನ್ನು ಪ್ರಸ್ತಾವಿಕವಾಗಿ ತಿಳಿಸಿದ್ದೇನೆ. ಸಮಾಜವಾದದ ಹೆಸರಿನಲ್ಲಿ ಮನಬಂದಹಾಗೆ ಮಾಡುತ್ತಿದ್ದಾರೆ. ಕಾಂಪೆನ್ಸೇಷನ್ ಎಷ್ಟು ಕೊಡುವರು ಎಂಬುದನ್ನು ನೋಡಬಹುದು. ಇಂದು ಅರ್ಬನ್ ಸೀಲಿಂಗ್ ಜಾರಿಗೆ ಬರುವುದೆಂದು ಹೇಳುತ್ತಿದ್ದಾರೆ. ಅದರಿಂದ ಅನುಕೂಲವಾಗುವಂತೆ ಕಾಣುವುದಿಲ್ಲ. ಅರ್ಬನ್ ಸೀಲಿಂಗ್ ೫ ಲಕ್ಷ ಅಥವಾ ಕಡಿಮೆ ಎಂದರೆ ೨ ಲಕ್ಷ, ಅದಕ್ಕಿಂತ ಕಡಮೆಯಾಗುವುದಿಲ್ಲ ಎಂದು ಹೇಳುತ್ತಿದ್ದಾರೆ. ಒಂದು ಮಾತನ್ನು ಆಗಲೇ ಹೇಳಿದ್ದೇನೆ, ಭೂ ಸುಧಾರಣೆ, ಅರ್ಬನ್ ಸೀಲಿಂಗ್, ಇನಕಂ ಸೀಲಿಂಗ್ ಎಲ್ಲಾ ಒಂದೇ ಸಲ ತರಬೇಕು. ಒಂದು ವೇಳೆ ಹಾಗೆ ಮಾಡಲು ಸಾಧ್ಯವಾಗದಿದ್ದರೆ ಭೂ ಸುಧಾರಣೆ ಮಾಡಿ ಸೈಮಲ್ಟೇನಿಯಸ್ ಆಗಿ ಇತರ ಸುಧಾರಣೆಗಳನ್ನೂ ಕಾರ್ಯರೂಪಕ್ಕೆ ತರಬೇಕು. ಸೈಮಲ್ಟೇನಿಯಸ್ ಆಗಿ ಎಲ್ಲಾ ಮಿತಿಗಳೂ ಬರಬೇಕು, ಹಾಗೆ ತರುವುದಾಗಿ ಆಶ್ವಾಸನೆ ಕೊಡಬೇಕು. ಇಂದು ಅರ್ಬನ್ ಸೀಲಿಂಗ್ ಹಾಕುವರು ಎಂದು ದೇಶದ ಮುಂದೆ ಒಂದು ಚಿತ್ರವಿದೆ, ನಮ್ಮ ರಾಜ್ಯ ಸರಕಾರ ಬಹಳ ಮುಂದುವರೆದು ಮಾಡಿದರೆ ೨ ಲಕ್ಷಕ್ಕಿಂತ ಕಡಮೆ ಸೀಲಿಂಗ್ ಮಾಡುವುದಿಲ್ಲ. ಇದರ ಬಗ್ಗೆ ಸೆಂಟ್ರಲ್ ಲೆಜಿಸ್ಲೇಷನ್ ಬರುವುದು. ಭೂ ಮಾಲೀಕರಿಗೆ ಕನಿಷ್ಟಪಕ್ಷ ವ್ಯವಸಾಯ ಮಾಡುವ ಭೂಮಿ ಕಿಮ್ಮತ್ತಿನ ಮೇಲೆ ೫ ಲಕ್ಷದ ವರೆಗಾದರೂ ಕಾಂಪೆನ್ಸೇಷನ್ ಕೊಡಬೇಕು, ಎರಡು ಲಕ್ಷಕ್ಕ ಲಿಮಿಟ್ ಮಾಡಿದರೆ ಅಲ್ಲಿಯ ವರೆಗಾದರೂ ಪರಿಹಾರ ಕೊಡಬೇಕು. ಎರಡು ಲಕ್ಷದ ಮಟ್ಟಿಗಾದರೂ ಭೂಮಿ ಸಿಕ್ಕಬೇಕು. ಆದಕ್ಕೆ ಬದಲಾಗಿ ಇಲ್ಲ ಆದಾಯದ ೧೫ ರಷ್ಟು ಎಂದು ತೋರಿಸಿದ್ದಾರೆ. ಕೆಲವರಿಗೆ ಕಾಂಪೆನ್ಸೇಷನ್ ಬಗ್ಗೆ ತಪ್ಪು ಕಲ್ಪನೆಯಿದೆ, ಹೆಚ್ಚು ಜಮೀನಿರುವವರಿಗೆ ಕಾಂಪೆನ್ಸೇಷನ್ ಬಗ್ಗೆ ಸರಿಯಾದ ಕಲ್ಪನೆಯಿಲ್ಲ. ೫೪ ಎಕರೆ ಉತ್ಪತ್ತಿ ನೋಡಿದರೆ ಸರಿಯಾದ ಪರಿಹಾರ ಸಿಕ್ಕುವುದಿಲ್ಲ. ೭೨ನೆಯ ಸೆಕ್ಷನ್ ಪ್ರಕಾರ ೧೫ ಪಟ್ಟು ಅಂದರೆ ೧೫೦ ರೂಪಾಯಿ ಎಕರೆಗೆ ಸಿಕ್ಕಬಹುದು, ದಯಮಾಡಿ ಕಾಂಪೆನ್ಸೇಷನ್ ತೀರ್ಮಾನ ಮಾಡುವಾಗ ಮಾರ್ಕೆಟ್ ವ್ಯಾಲ್ಯೂ ಗಣನೆಗೆ ತೆಗೆದುಕೊಳ್ಳಬೇಕೆಂದು ತೀರ್ಮಾನ ಮಾಡಬೇಕು.

ಮಾರುಕಟ್ಟೆಯಲ್ಲಿ ಅದಕ್ಕೆ ಏನು ಬೆಲೆ ಇರುತ್ತದೋ ಅದರ ಮೇಲೆ ಇದರ ಬೆಲೆಯನ್ನು ನಿರ್ಧಾರ ಮಾಡಿ ಎಂದು ಕೇಳಿಕೊಳ್ಳುತ್ತಿದ್ದೇನೆ. ಸರ್ಕಾರದವರು ಅರ್ಬನ್ ಪ್ರಾಪರ್ಟಿಗೆ ದೊರೆಯುತಕ್ಕ ಪರಿಹಾರ ೩ ಲಕ್ಷ ರೂಪಾಯಿ ಇದ್ದರೆ ಭೂಮಾಲೀಕರಿಗೆ ದೊರೆಯುತಕ್ಕ ಪರಿಹಾರವನ್ನು ಕನಿಷ್ಟಪಕ್ಷ ೨ ಲಕ್ಷ ರೂಪಾಯಿಗಳಿಗಾದರೂ ನಿಗದಿ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಈ ದಿವಸ ಮಸೂದೆಯಲ್ಲಿ ಹೇಳಿರತಕ್ಕ ಪರಿಹಾರ ನ್ಯಾಯವಾದುದಲ್ಲ. ಕನಿಷ್ಟಪಕ್ಷ ೪೦—೫೦ ಸಾವಿರ ರೂಪಾಯಿಗಳ ಬೆಲೆ ಬರತಕ್ಕ ಕಡೆ ಅದಕ್ಕೆ ೪—೫ ಸಾವಿರ ಪರಿಹಾರ ಸೂಚಿಸಿದ್ದಾರೆ. ಇದು ಯಾವ ನ್ಯಾಯ ? ನಗರ ಆಸ್ತಿಯನ್ನು ಕಳೆದುಕೊಳ್ಳತಕ್ಕ ವ್ಯಕ್ತಿಗೆ ದೊರೆಯುತಕ್ಕ ಪರಿಹಾರಕ್ಕೂ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಭೂಮಿಯನ್ನು ಕಳೆದುಕೊಳ್ಳತಕ್ಕ ವ್ಯಕ್ತಿಗೆ ದೊರೆಯುತಕ್ಕ ಪರಿಹಾರದಲ್ಲಿ ವ್ಯತ್ಯಾಸವಿರಬಾರದೆಂದು ನಾನು ಹೇಳುತ್ತೇನೆ.

ಇನ್ನು ಭೂ ವಿತರಣೆಯ ಬಗ್ಗೆ ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಭೂಮಿಯನ್ನು ಹಂಚುವುದಕ್ಕೆ ಅಧಿಕಾರವನ್ನು ಸರ್ಕಾರದವರು ತಾಶೀಲ್ದಾರರಿಗೇ ಕೊಡಲಿ ಅಥವಾ ಯಾರಿಗೇ ಕೊಡಲಿ ಅದರ ಬಗ್ಗೆ ನಾನೇನೂ ಹೇಳುವುದಿಲ್ಲ. ಆದರೆ ಆ ಸಮಿತಿಯಲ್ಲಿ ಯಾರು ಯಾರನ್ನೋ ಹಾಕುತ್ತಿದ್ದಾರೆ. ಅರ್ಹತೆ ಇಲ್ಲದವರನ್ನೆಲ್ಲಾ ಹಾಕುತ್ತಿದ್ದಾರೆ. ಅದು ಸರಿಯಲ್ಲ ಎಂದು ಹೇಳುತ್ತೇನೆ. ಆ ಸಮಿತಿಯಲ್ಲಿ ಯಾವುದೋ ಪೊಲಿಟಿಕಲ್ ಸೋಗಿನಲ್ಲಿ ನಾನೂ ಜನರಿಗೆ ಭೂಮಿಯನ್ನು ವಿತರಣೆ ಮಾಡಿದೆ ಎಂದು ಒಂದು ಹೆಸರನ್ನು ಗಳಿಸುವುದಕ್ಕಾಗಿ ಅನರ್ಹರನ್ನೂ ಕೂಡ ಅದರಲ್ಲಿ ಹಾಕುತ್ತಿರುವುದು ಸರಿಯಲ್ಲ ಎಂದು ಹೇಳುತ್ತೇನೆ. ಆ ಸಮಿತಿಯಲ್ಲಿ ಹರಿಜನರು ಮತ್ತು ಭೂಮಾಲೀಕರ ಪ್ರತಿನಿಧಿಗಳೂ ಇರಲಿ .....

ಶ್ರೀ ಡಿ. ದೇವರಾಜ ಅರಸ್.—ಭೂಮಿಯನ್ನು ಸರ್ಕಾರದವರು ಯಾರಿಂದ ಸ್ವಾಧೀನ ಮಾಡಿಕೊಳ್ಳಬೇಕೆಂದಿದ್ದಾರೋ ಆ ಜನರಿಗೇ ಆ ಭೂಮಿಯನ್ನು ಹಂಚತಕ್ಕ ಅವಕಾಶವನ್ನೂ ಅವರಿಗೇ ಬಿಟ್ಟು ಕೊಡಿ ಎಂಬುದಾಗಿ ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಇದೂ ಒಂದು ವಾದವೇ,

ಶ್ರೀ ವಿಶ್ವನಾಥ ರೆಡ್ಡಿ.—ಸರ್ಕಾರದವರು ಒಂದು ಲಿಮಿಟ್ಟನ್ನು ಹಾಕಿ ಇಂತಿಷ್ಟು ವರ್ಷಗಳೊಳಗೆ ಭೂಮಿಯನ್ನು ಅಂದರೆ ಸರ್‌ಪ್ಲಸ್ ಭೂಮಿಯನ್ನು ರೈತರಿಗೆ ಭೂಮಿ ಇಲ್ಲದವರಿಗೆ ವಿತರಣೆ ಮಾಡಬೇಕೆಂಬ ನಿಯಮವನ್ನು ಹಾಕಿ... ಈಗ ನಾನು ಕೊಟ್ಟಂಥ ಸಲಹೆಗಳನ್ನು ಜಾಯಿಂಟ್ ಸೆಲೆಕ್ಟ್ ಸಮಿತಿಯವರು ಪರಿಶೀಲಿಸಿ ಇದರಲ್ಲಿ ಸೂಕ್ತ ಬದಲಾವಣೆಗಳನ್ನು ಮಾಡಿ ಮತ್ತೆ ಇದನ್ನು ಇದೇ ಸದನದ ಮುಂದೆ ತರಬೇಕೆಂದು ಹೇಳಿ ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶ ಕಲ್ಪಿಸಿ ಕೊಟ್ಟ ಮಾನ್ಯ ಉಪಾಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎನ್. ಹುಚ್ಚಮಾಸ್ತಿ ಗೌಡ (ಕಂದಾಯ ಶಾಖೆಯ ಮಂತ್ರಿಗಳು).—ಮಾನ್ಯ ಉಪಾಧ್ಯಕ್ಷರೆ : ಈ ಮಸೂದಾ ಕಾನೂನಿನ ಮೇಲೆ 24 ಜನ ಮಾನ್ಯ ಸದಸ್ಯರುಗಳು ಭಾಗವಹಿಸಿ ಮಾತನಾಡಿದ್ದಾರೆ. ಮತ್ತು ಬಹಳ ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಅದಕ್ಕೋಸ್ಕರವಾಗಿ ನಾನು ಇವರಿಗೆ ನನ್ನ ಕೃತಜ್ಞತೆಗಳನು ತಮ್ಮ ಮೂಲಕ ಅರ್ಪಿಸುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀಮಾನ್ ವಿಶ್ವನಾಥ ರೆಡ್ಡಿಯವರು ಒಂದು ಬಹು ಮುಖ್ಯವಾದ ವಿಚಾರವನ್ನು ಹೇಳಿದ್ದಾರೆ. ಅದನ್ನು ನಾನು ಮರೆತೇನು ಅನ್ನುವ ದೃಷ್ಟಿಯಿಂದ ಮೊದಲೇ ಅವರ ಪ್ರಶ್ನೆಗೆ ಉತ್ತರವನ್ನು ಕೊಟ್ಟು, ನಂತರ ಮುಂದಿನ ವಿಚಾರಕ್ಕೆ ಹೋಗೋಣವೆಂದು ಅವರ ಪ್ರಶ್ನೆಯನ್ನು ಪ್ರಸ್ತಾಪಿಸುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ವಿಶ್ವನಾಥ ರೆಡ್ಡಿಯವರು ಭೂಮಾಲೀಕನಿಂದ ಒಂದು ಮಿತಿ ಹಾಕಿ ಆತನಿಂದ ರೆಸ್ಯೂಂ ಮಾಡಬೇಕೆಂದಿರತಕ್ಕ ಭೂಮಿ ಏನಿರುತ್ತದೋ ಅದನ್ನು ಭೂಮಿ ಇಲ್ಲದ ರೈತರಿಗೆ ಹಂಚುವುದಕ್ಕೆ ಆ ಅಧಿಕಾರವನ್ನು ಆ ಭೂಮಾಲಿಕರಿಗೆ ಬಿಟ್ಟು ಕೊಡಬೇಕೆಂದು ಹೇಳಿದ್ದಾರೆ. ಇದು ಮಾನ್ಯ ಸದಸ್ಯರು ಮಾಡಿರತಕ್ಕ ಒಂದು ಸಲಹೆ ಆದರೆ ನಾನು ರಾಜ್ಯದಲ್ಲಿ ಅಲ್ಲಲ್ಲೇ ಸಂಚಾರ ಮಾಡಿದ ಕಾಲಕ್ಕೆ ನನ ಬಳಿಗೆ ಅನೇಕ ಭೂಮಾಲೀಕರೂ, ಗೇಣಿದಾರರು ಮತ್ತು ವ್ಯವಸಾಯದ ಕೂಲಿಗಾರರು ಅನೇಕ ಮನವಿಗಳನ್ನು ಕೊಟ್ಟಿದ್ದಾರೆ; ಹಾಗೂ ಇದರ ವಿಚಾರದಲ್ಲಿ ಚರ್ಚೆಯನ್ನೂ ಕೂಡ ಮಾಡಿದ್ದಾರೆ. ಆದರೆ ಆ ಕಾಲಕ್ಕೆ ನನಗೆ ಅಲ್ಲಿ ಭೂಮಾಲಿಕರು ಕೊಟ್ಟ ಸಲಹೆಗೂ ಮತ್ತು ಇಲ್ಲಿ ಮಾನ್ಯ ವಿಶ್ವನಾಥರೆಡ್ಡಿಯವರು ಕೊಡತಕ್ಕ ಸಲಹೆಗೂ ಯಾವ ವ್ಯತ್ಯಾಸವೂ ಇದ್ದಂತೆ ಕಂಡುಬರುತ್ತಿಲ್ಲ. ಅವರು ಹೇಳಿದ್ದ ಸಲಹೆ ಮತ್ತು ಇಲ್ಲಿ ಮಾನ್ಯ ಸದಸ್ಯರ ಸಲಹೆ ಇವೆರಡೂ ಒಂದೇ ಆಗಿವೆ. ಇವರ ಸಲಹೆಯಲ್ಲಿ ಇರತಕ್ಕ ಒಂದು ವೈಶಿಷ್ಟ್ಯತೆ ಏನೆಂದರೆ ಭೂಮಿಯನ್ನು ಯಾರು ಸಾಗುವಳಿ ಮಾಡುತ್ತಿದ್ದಾರೋ ಆ ರೈತರೇ ಸಾಗುವಳಿ ಮಾಡಿಕೊಂಡು ಮುಂದುವರೆಯಲಿ, ಆದರೆ ಆ ಭೂಮಿಯ ಮಾಲಿಕತ್ವ ಮಾತ್ರ ಭೂಮಾಲಿಕನಲ್ಲಿಯೇ ಉಳಿಯಲಿ ಎಂದು ಹೇಳುತ್ತಿದ್ದಾರೆ.

ಶ್ರೀ ವಿಶ್ವನಾಥ ರೆಡ್ಡಿ.—2-3 ವರ್ಷಗಳಲ್ಲಿ ಮಾಲೀಕತ್ವ ಆ ರೈತನಿಗೆ ವರ್ಗಾಯಿಸಬೇಕೆಂಬ ಒಂದು ಕಂಡಿಷನ್ನನ್ನು ಹಾಕಿ, ಅದಕ್ಕೆ ಬೇಡ ಎನ್ನುವುದಿಲ್ಲ.

ಶ್ರೀ ಎನ್ ಹುಚ್ಚಮಾಸ್ತಿಗೌಡ.—ಒಂದು ವೇಳೆ ಆ ಭೂಮಾಲಿಕನಿಗೆ 3 4 ಜನ ಮೈನರ್ ಮಕ್ಕಳಿದ್ದು, ಆ ಭೂಮಿಯನ್ನು ರೈತನಿಗೆ ವರ್ಗಾಯಿಸತಕ್ಕ ಅವಧಿಯೊಳಗೆ ಆ ಮಕ್ಕಳು ಮೈನಾರ್ಟಿ ದಾಟಿ ಮೆಜಾರ್ಟಿಗೆ ಬಂದಾಗ ಆ ಭೂಮಾಲಿಕನ ಕೈಲಿ ಸೀಲಿಂಗ್ ಮಿತಿಗೆ ಮೀರಿ 10-12 ಎಕರೆ ಭೂಮಿ ಇದ್ದರೆ ಆ ಭೂಮಿ ರೈತನಿಗೆ ಮಾಲೀಕತ್ವ ಬದಲಾವಣೆ ಮಾಡತಕ್ಕ ವೇಳೆಗೆ ಸರಿಯಾಗಿ ಆ ಮೆಜಾರ್ಟಿಗೆ ಬಂದ ಮಕ್ಕಳು ತಮಗೂ ಒಂದು ಭಾಗ ಸೇರಬೇಕೆಂದು ವಾದ ಹೂಡಿದರೆ ಆ ಭೂಮಿ ರೈತನಿಗೆ ಸಿಕ್ಕುವುದೇ ಇಲ್ಲ ಎಂಬ ಭೀತಿ ನನಗೆ ಇದೆ.

ಮಾನ್ಯ ವಿರೋಧ ಪಕ್ಷದ ನಾಯಕರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಆದರೆ ನಾನು ಈ ಸಂಧರ್ಭದಲ್ಲಿ ಎಲ್ಲಾ ಮಾನ್ಯ ಸದಸ್ಯರೂ ಕೊಟ್ಟಿರತಕ್ಕ ಅಭಿಪ್ರಾಯಗಳ ಬಗ್ಗೆ ಹೇಳುವುದಕ್ಕೆ ಕಾಲವಿಲ್ಲ. ಆದುದರಿಂದ ಮುಖ್ಯವಾದ ವಿಷಯಗಳ ಬಗ್ಗೆ ಕೆಲವು ಮಾತುಗಳನ್ನು ತಿಳಿಸುವುದಕ್ಕೆ ಇಷ್ಟಪಡುತ್ತೇವೆ. ಮಾನ್ಯ ಶ್ರೀ ದೇವೇಗೌಡರು ಹೇಳುತ್ತಾ ಒಂದು ಊರಿನಲ್ಲಿ 2 ಎಕರೆ ಜಮೀನು ಒಬ್ಬನಿಗೆ ಇದ್ದರೆ, ಅವನಿಗೆ ಏನಾದರೂ ಇನ್ನು 20-30 ಮೈಲಿಗಳ ದೂರದಲ್ಲಿ ಮತ್ತೆ ಕೆಲವಾರು ಎಕರೆಗಳಷ್ಟು ಜಮೀನುಗಳಿದ್ದರೆ, ಅಂತಹವರಿಗೆ 16 ಕಿಲೊ ಮೀಟರ್‌ಗಳಷ್ಟು ಡಿಸ್ಟೆನ್ಸ್ ಮಿತಿ ಹಾಕಿದರೆ ಅಂತಹವನು ಎರಡು ಭೂಮಿಗಳನ್ನು ಉಳಿಸಿಕೊಳ್ಳಲು ದಕ್ಕುವುದಿಲ್ಲ. ಅಂತಹ ಸಂಧರ್ಭಗಳಲ್ಲಿ ಒಂದರ ಮೇಲೆಯೇ ಸೀಲಿಂಗ್ ಲಿಮಿಟ್ ಹಾಕಬೇಕೆಂದು ಹೇಳಿದರು ನಿಜವಾಗಿ ಅದನ್ನು ನಾವು ಯೋಚನೆ ಮಾಡಬೇಕಾದ ವಿಷಯ. ಈಗಾಗಲೇ ಇದರ ಬಗ್ಗೆ ಒಂದು ಅಭಿಪ್ರಾಯವನ್ನು ತಿಳಿಸುವುದಕ್ಕೆ ಇದು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹೋಗುವುದರಿಂದ ಅಲ್ಲಿ ವಿಷದವಾಗಿ ಚರ್ಚೆ ಮಾಡಬಹುದು ಇಲ್ಲಿ ಅನೇಕ ಜನ ಸದಸ್ಯರು ಈ ವಿಷಯದಲ್ಲಿ ಪ್ರಸ್ತಾಪ ಮಾಡಿದ್ದಾರೆ ಎರಡು ಮೂರು ರಾಜ್ಯಗಳಲ್ಲಿ ಕೆಲವರಿಗೆ ಭೂಮಿ ಇರತಕ್ಕ ಪ್ರಸಂಗಗಳೂ ಇವೆ. ಅಂತಹ

ಸಂದರ್ಭಗಳಲ್ಲಿ ಸೀಲಿಂಗ್ ಲಿಮಿಟ್ಟನ್ನು ಹಾಕಿದರೂ ಕೂಡ ಆ ಸೀಲಿಂಗ್ ಲಿಮಿಟ್ಟಿನಲ್ಲಿ ಆ ಜಮೀನುಗಳನ್ನು ಉಳಿಸಿಕೊಳ್ಳುವುದು ಬಹಳ ಕಷ್ಟವಾಗುತ್ತದೆ. ಆದ್ದರಿಂದ ದೂರ ಎಷ್ಟು ಇರಬೇಕು, ಅಥವಾ ಆ ರೀತಿ ಇರಲೇಕೂಡದು ಎಂಬೀ ವಿಷಯಗಳನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿ ಯೋಚನೆ ಮಾಡುವುದು ಅಗತ್ಯವೆಂದು ನಾನು ಭಾವಿಸುತ್ತೇನೆ.

ಶ್ರೀ ಕೊಣಂದೂರು ಲಿಂಗಪ್ಪ.—ಯಾರಿಗಾದರೂ ಒಬ್ಬರಿಗೆ ಗುಜರಾತಿನಲ್ಲಿ ಸ್ವಲ್ಪ ಭೂಮಿ ಇದೆ ಯೆಂದು ಹೇಳಿದರೆ, ಅವರಿಗೆ ಈ ಮಿತಿ ಅನ್ವಯಿಸುತ್ತದೆಂದು ಇಂಟ್ರೊಡ್ಯೂಸ್ ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಒಂದೊಂದು ಕಡೆ ಒಂದೊಂದು ರೀತಿಯಲ್ಲಿ ಇದೆ. ಭರತ ಖಂಡದ ಎಲ್ಲಾ ರಾಜ್ಯಗಳಲ್ಲಿ ಒಂದೇ ವಿಧವಾದ ಕಾನೂನು ಮಾಡುವುದು ಸ್ವಲ್ಪ ಕಷ್ಟ. ಆಯಾ ರಾಜ್ಯದ ಪರಿಸ್ಥಿತಿಯನ್ನು ನೋಡಿಕೊಂಡು ಮಾಡಬೇಕದುದು ಅಗತ್ಯವಿದೆ. ಆದ್ದರಿಂದ ಒಂದು ರಾಜ್ಯದಲ್ಲಿ ಇರುವಂತೆ ಎಲ್ಲಾ ರಾಜ್ಯಗಳಲ್ಲಿಯೂ ಇರಬೇಕೆಂದು ಒಪ್ಪಿಕೊಳ್ಳುವುದು ಸ್ವಲ್ಪ ಕಷ್ಟವಾಗುತ್ತದೆ. ಬೇರೆ ವರಮಾನ ಖಾಯಂ ಆಗಿ ಇರತಕ್ಕವರ ಬಗ್ಗೆ 5 ವರ್ಷಗಳ ನಿವ್ವಳ ಅಥವಾ ಗ್ರಾಸ್ ನಿವ್ವಳ ಆದಾಯ ಏನೆಂಬುನ್ನು ತಿಳಿದು ಅವರ ಬಗ್ಗೆ ಒಂದು ಮಿತಿಯನ್ನು ನಿಗದಿಮಾಡುವುದನ್ನು ಈಗಲೆ ಹೇಳುವುದ ಕ್ಕಾಗುವುದಿಲ್ಲ. ಅಂತಹ ವರಮಾನವಿದ್ದವನಿಗೆ ಭೂಮಿಯನ್ನು ಇಟ್ಟುಕೊಳ್ಳುವುದಕ್ಕೆ ಅವಕಾಶ ಇರ ಕೂಡದು. ಇದಕ್ಕೆ ಸಂಬಂಧಪಟ್ಟ ಹಾಗೆ ಮುಸೂದಾ ಕಾನೂನುಗಳು ಇದರೆ, ಅದನ್ನು ಇಟ್ಟು ಕೊಳ್ಳುವುದು ಸಾಧ್ಯವೇ ಇಲ್ಲವೇ ಎಂಬ ಪ್ರಶ್ನೆಯನ್ನು ಅನೇಕ ಸದಸ್ಯರು ಮಾಡಿದ್ದಾರೆ. ಈಗ ಇಟ್ಟು ಕೊಂಡಿರತಕ್ಕ ಭೂಮಿಯ ಬಗ್ಗೆ ಯಾವ ಅಡ್ಡಿಯನ್ನೂ ಹಾಕಿಲ್ಲ. ಮುಂದೆ ಸಂಪಾದಿಸಿಕೊಳ್ಳುವ ಭೂಮಿಗೆ ಅಡ್ಡಿ ಇದೆ, ಅದನ್ನೂ ಕೂಡ ಸೆಲೆಕ್ಟ್ ಕಮಿಟಿಯಲ್ಲಿ ಪರ್ಯಾಲೋಚನೆ ಮಾಡುವುದಕ್ಕೆ ಆಗುತ್ತದೆಂದು ನಾನು ಹೇಳುತ್ತೇನೆ. ಮತ್ತೆ ಭೂಮಿಯನ್ನು ತನ್ನ ಸ್ವಂತ ಸಾಗುವಳಿಗೋಸ್ಕರ ವಾಪಸ್ಸು ತೆಗೆದುಕೊಳ್ಳುವ ವಿಷಯದಲ್ಲಿ ಬಹಳ ಮಟ್ಟಿಗೆ ಈ ಸಭೆಯ ಅನೇಕ ಸದಸ್ಯರು ತಂತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಪಡಿಸಿದಾರೆ. ಕೆಲವರು ಭೂಮಿಯನ್ನು ವಾಪಸ್ಸು ತೆಗೆದುಕೊಳ್ಳುವ ಅವಕಾಶ ತಪ್ಪಿಹೋಗಬೇಕೆಂದು ಹೇಳುತ್ತಿದ್ದಾರೆ. ಇನ್ನು ಕೆಲವರು ಸ್ವಂತ ಸಾಗುವಳಿಗೋಸ್ಕರ ಸಾಕಾದಷ್ಟು ಅವಕಾಶ ಕೊಡಬೇಕೆಂದು ಹೇಳುತ್ತಿದ್ದಾರೆ. ಇದರಲ್ಲಿ ಮುಖ್ಯೋದ್ದೇಶ, ಭೂಮಿಯನ್ನು ಗೇಣಿದಾರನಿಂದ ವಾಪಸ್ಸು ಪಡೆಯಬೇಕಾದರೆ, ಅವನು ನಿಜವಾಗಿ ಸ್ವಂತ ಸಾಗುವಳಿ ಮಾಡುತ್ತಿದ್ದಾನೆಯೋ ಇಲ್ಲವೆ ಎಂಬುದನ್ನು ಬಹು ಮುಖ್ಯವಾಗಿ ನೋಡಬೇಕು. ಈಗ ಭೂಸುಧಾರಣೆ ಜಾರಿಗೆ ಬರಬಹುದೆಂದೂ ಗೇಣಿದಾರನನ್ನು ಭೂಮಾಲೀಕ ನಷ್ಟಗಿ ಮಾಡಬಹುದೆಂಬ ಭಯದಿಂದ, ಸ್ವಂತ ಸಾಗುವಳಿ ಮಾಡುವ ಉದ್ದೇಶ ಇರಲಿ, ಇಲ್ಲದೇ ಇರಲಿ, ಎಲ್ಲರೂ ರೆಸ್ಯೂಮ್ ಮಾಡಬೇಕೆಂದು ಅರ್ಜಿಗಳನ್ನು ಹಾಕಿದ್ದಾರೆ. ಹಿಂದಿನ ಕಾನೂನಿನಲ್ಲಿ ಆರು ವರ್ಷಗಳವರೆಗೆ ಅದನ್ನು ಮಾರಕೂಡದು ಎಂಬುದಾಗಿ ನಿಯಮವಿತ್ತು. ಖಾಲಿ ಜಮೀನು ಇಟ್ಟುಕೊಂಡು ಆಮೇಲೆ ಮಾರುವುದಕ್ಕೆ ಅವಕಾಶ ಇದೆ. ಆ ಭಯ ಹೋಗಲಿ ಎಂದು ಇಂತಹ ಒಂದು ವಿಧಾನವನ್ನು ಈ ಮುಸೂದಾ ಕಾನೂನಿನಲ್ಲಿ ತಂದಿರುವುದಾಗಿದೆ. ಇದರಲ್ಲಿನ ಮುಖ್ಯೋದ್ದೇಶದ ಪ್ರಕಾರ ಅವನಿಗೆ ಸ್ವಂತ ಸಾಗುವಳಿ ಮಾಡುವ ಉದ್ದೇಶವಿದೆಯೋ ಇಲ್ಲವೋ ಎಂಬುದನ್ನು ಕಂಡುಹಿಡಿದು ಗೇಣಿದಾರನಿಂದ ವಾಪಸ್ಸು ತೆಗೆದುಕೊಳ್ಳುವ ಅವಕಾಶವಿದ್ದಿದ್ದ ಅವನು ಮಾರುವ ಅಗತ್ಯವಿರಲಿಲ್ಲ. ಗೇಣಿದಾರನನ್ನು ತಪ್ಪಿಸುವ ಉದ್ದೇಶದಿಂದ ಅದನ್ನು ಮಾರಕೂಡದೆಂದು ಈ ಮುಸೂದ ಕಾನೂನಿನಲ್ಲಿ ಇಟ್ಟಿದ್ದೇವೆ. ಈ ಒಂದು ವಿಷಯದಲ್ಲಿ ಹೇಗೆ ಜಾಯಿಂಟ್ ಸೆಲೆಕ್ಟ್ ಕಮಿಟಿ ಅಭಿಪ್ರಾಯ ಪಡುತ್ತದೆಯೋ ಗೊತ್ತಿಲ್ಲ. ಅದನ್ನು ಬದಲಾವಣೆಮಾಡುವ ಅಂಶವೇನೂ ಇಲ್ಲವೆಂದು ನನ್ನ ಅಭಿಪ್ರಾಯ.

ಇದನ್ನು ಅಪ್ರೂರ್ಡ್ ಇರ್ರಿಗೇಷನ್ ವಿಷಯ. ನಾನು ಏನು ಇದರ ಬಗ್ಗೆ ನಿರ್ದಿಷ್ಟವಾಗಿ ಹೇಳಬೇಕಾಗಿತ್ತೋ ಅದನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ. ಈ ವಿಚಾರವನ್ನು ಸೆಕ್ಷನ್ 2 (ಸಿ)ನಲ್ಲಿ ವಿವರವಾಗಿ ತಿಳಿಸಿದೆ. ಅದನ್ನು ಮಾನ್ಯ ಸದಸ್ಯರು ನೋಡಬಹುದು. ಇನ್ನು ತೆಂಗಿನಗಿಡ ಹಾಕಿರುವುದರಲ್ಲಿ ಸೀಲಿಂಗ್ ಲಿಮಿಟ್ ಖುಷ್ಕಿ ಜಮೀನಿನ 54 ಎಕರೆ ಸರಿಸಮವೆಂದು ಈ ಮುಸೂದಾ ಕಾನೂನಿನಲ್ಲಿದೆ. ಇನ್ನು ಶ್ರೀಮಾನ್ ಪುಟ್ಟಸ್ವಾಮಿಯವರು ಹೇಳುತ್ತಾ ಕುಣಿಗಲ್‌ನಲ್ಲಿ ಹೆಚ್ಚಿಗೆ ತೆಂಗಿನ ಗಿಡಗಳು ಇವೆಯೆಂದು ಹೇಳಿದರು. ಆದರೆ ಅದು ಹೆಚ್ಚಿಗೆ ಇಲ್ಲ. ಅವರಿಗೆ ನಾನು ಅದನ್ನು ಹಾಕಿಸಿದ್ದೇನೆಂಬ ಅನುಮಾನ ಬಂದಿದೆ. ಇದನ್ನು ಪುರಸ್ಕಾರವಾಗಿ ಯೋಚನೆ ಮಾಡುವುದು ಅಗತ್ಯವೆಂದು ಹೇಳುತ್ತೇನೆ.

(ಶ್ರೀ ಎನ್. ಹುಚ್ಚಮಾಸ್ತಿಗೌಡ)

ಇನ್ನು ಜ್ಯೂರಿಸ್‌ಟಿಕ್ ಪರ್ಸನಲ್ ಇರಬೇಕೆ ಅಥವಾ ಈಗ ಇರುವ ಹಾಗೆಯೇ ಇರಬೇಕೇ ಎಂಬ ಬಗ್ಗೆ ಪ್ರಶ್ನೆಯಾಯಿತು. ಈ ಮಸೂದಾ ಕಾನೂನನ್ನು ತಂದಿರುವ ಉದ್ದೇಶ, ಜಾಯಿಂಟ್ ಫ್ಯಾಮಿಲಿ ಒಂದು ಜ್ಯೂರಿಸ್‌ಟಿಕ್ ಪರ್ಸನ್ ಅಗುತ್ತದೆಯೇ ಎಂಬುದು. ಈ ರೀತಿಯಾಗಿ ಈಗ ನಾನು ತಿಳಿದಹಾಗೆ ಬೊಂಬಾಯಿನಲ್ಲಿರಬಹುದು. ಆದರೆ ಯಾವುದಾದರೂ ಒಂದು ರೀತಿಯಲ್ಲಿ ಒಂದು ಪಕ್ಷ ಈಗ 16 ಕಿಲೊ ಮೀಟರ್ ದೂರದ ಪರಿಮಿತಿಯನ್ನು ತೆಗೆದುಹಾಕಿ ಅಂದರೆ ಎಲ್ಲಿ ಬೇಕಾದರೂ ಅವನು ವ್ಯವಸಾಯ ಮಾಡಬಹುದೆಂದು ಹೇಳಿದರೆ, ಕಂಪೆನಿಯ ಹೆಸರಿನಲ್ಲಿ ಎಲ್ಲಿಯಾದರೂ ಆ ಮಿತಿಯೊಳಗೆ ವ್ಯವಸಾ ಮಾಡುವುದು ಸಾಧ್ಯವಿಲ್ಲ. ಅದಕ್ಕೆ ಬದಲಾಗಿ ತೆಂಗು ಬೆಳೆಯುವುದರಲ್ಲಿ ಸ್ವಂತ ವ್ಯವಸಾಯ ವನ್ನು ಅವಲಂಬಿಸಿರುತ್ತಾನೆ. ಆ ವ್ಯವಸಾಯ ಮಾಡತಕ್ಕವನಿಗೆ ಇದು ಸಲ್ಲಬೇಕೆಂದು ಉದ್ದೇಶ ಆದ್ದರಿಂದ ನಮ್ಮ ರಾಜ್ಯದಲ್ಲಿರತಕ್ಕ ಭೂಮಿಗೆ ಒಂದು ಮಿತಿ ಬೇಕು. ಭೂಮಿ ಒಂದು ದೊಡ್ಡ ಸಂಪನ್ಮೂಲವಾಗಿ ರುವುದರಿಂದ ಅದಕ್ಕೆ ಯಾವುದಾದರೂ ಒಂದು ಗರಿಷ್ಠ ಮಿತಿ ಹಾಕಿ ಹೆಚ್ಚು ಜನರಿಗೆ ಭೂಮಿ ಸಿಗಬೇಕೆಂಬುದೇ ಈ ಮಸೂದಾ ಕಾನೂನಿನ ಮೂಲಭೂತವಾದ ಉದ್ದೇಶ. ಜೂರಿಸ್‌ಟಿಕ್ ಪರ್ಸನ್ ಎಂದು ತೆಗೆದು ಕೊಳ್ಳಬಾರದೆಂಬ ದೃಷ್ಟಿಯಿಂದ ಹಾಕಿರತಕ್ಕದ್ದು. ನ್ಯಾಚುರಲ್ ಪರ್ಸನ್ ಎಂದು ಇರಬೇಕು. ಆದ್ದರಿಂದ ಇದನ್ನು ಬದಲಾವಣೆ ಮಾಡಬಾರದೆಂಬುದೇ ನನ್ನ ಅಭಿಪ್ರಾಯ. ಮಾನ್ಯ ಸದಸ್ಯರು ಈ ವಿಚಾರದಲ್ಲಿ ಹೆಚ್ಚಿಗೆ ಆಲೋಚನೆ ಮಾಡಬಾರದು. ಏಕೆಂದರೆ ಇದು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಬರುತ್ತದೆ.

ಇನ್ನು ಈ ಭೂಸುಧಾರಣೆಯ ಜೊತೆಗೆ ಪಟ್ಟಣಗಳ ಆಸ್ತಿಯ ಮೇಲೆ ಮಿತಿ ಹಾಕುವುದನ್ನು ಏಕ ಕಾಲದಲ್ಲಿ ಏಕೆ ತರಕೂಡದು ಎಂಬುದಾಗಿ ಕೆಲವು ಸದಸ್ಯರು ಪ್ರಶ್ನೆ ಕೇಳಿದರು. ಈಗಾಗಲೇ ಮಾನ್ಯ ಸದ ಸ್ಯರು ಪತ್ರಿಕೆಗಳಲ್ಲಿ ಓದಿರುವ ಹಾಗೆ ಕೇಂದ್ರಸರ್ಕಾರದಲ್ಲಿ ಇದರ ಬಗ್ಗೆ ಒಂದು ಶಾಸನವನ್ನು ತರುವ ಸಿದ್ಧ ತೆಯಲ್ಲಿದ್ದಾರೆ. ಅದೂ ಇಲ್ಲದೆ ಈ ದಿವಸವೇ ಈ ಸಭೆಯಲ್ಲಿ ಪಟ್ಟಣಗಳ ಸ್ಥಿರಾಸಿಮೇಲೆ ಒಂದು ಹತೋಟಿ ತರುವ ಉದ್ದೇಶದಿಂದ, ಇದಕ್ಕೆ ಸಂಬಂಧಪಟ್ಟಹಾಗೆ ಕಾನೂನುಬದ್ಧವಾಗಿ ರಚನೆ ಮಾಡುವ ಒಂದು ಅಧಿಕಾರವನ್ನು ಕೇಂದ್ರಸರ್ಕಾರಕ್ಕೆ ವಹಿಸಬೇಕೆಂಬ ದೃಷ್ಟಿಯಿಂದ ಈ ದಿವಸ ಕಾರ್ಯಕ್ರಮದಲ್ಲಿ ಸೇರಿಸ ಲಾಗಿದೆ. ಆ ವಿಷಯದಲ್ಲಿ ನಮಗೆ ಹೆಚ್ಚಿನ ಆಸಕ್ತಿ ಇದೆ. ಅದರಲ್ಲಿ ಅನುಮಾನ ಬೇಡವೆಂದು ಹೇಳುತ್ತೇನೆ. ಮಾನ್ಯ ಶ್ರೀ ಶಾಮಣ್ಣನವರು ಇದನ್ನು ಸಾರ್ವಜನಿಕರ ಅಭಿಪ್ರಾಯಕ್ಕೆ ಕಳುಹಿಸಬೇಕೆಂದು ಹೇಳಿದರು. ಇದೇನು ಹೊಸದಲ್ಲ. ಸಾರ್ವಜನಿಕರ ವಿರೋಧ ಹಾಗೂ ಪರ ಈ ಒಂದು ವಿಷಯದ ಬಗ್ಗೆ ಎಷ್ಟರ ಮಟ್ಟಿಗೆ ಇದೆಯೆಂಬ ವಿಚಾರದಲ್ಲಿ ಈಗಾಗಲೇ ಸಾಕಷ್ಟು ಅಭಿಪ್ರಾಯ ಪಡೆದು ಈಗಾಗಲೆ ಹೆಚ್ಚು ಅಭಿ ಪ್ರಾಯ ಸಂಗ್ರಹಣೆಯಾಗಿದೆ. ಆದ್ದರಿಂದ ಮತ್ತೆ ಇದನ್ನು ಸಾರ್ವಜನರ ಅಭಿಪ್ರಾಯಕ್ಕೆ ಕಳುಹಿಸುವ ಅಗತ್ಯವಿಲ್ಲವೆಂದು ನಾನು ಭಾವಿಸುತ್ತೇನೆ. ಮಾನ್ಯ ಶ್ರೀ ಶಾಮಣ್ಣನವರು ಭೂಮಿಯ ಮೇಲೆ ಏನೊಂದು ಗರಿಷ್ಠ ಮಿತಿಯನ್ನು ಹಾಕುತ್ತಾರೊ ಅದು ಇಂಗ್ಲೆಂಡಿನಲ್ಲಿರುವ ಹಾಗೆ ಲಾ ಆಫ್ ಪ್ರಾಜಿನಿ ಪ್ರಕಾರ ಇರಬೇಕೆಂದು ಹೇಳಿದರು. ಇದೊಂದು ವೈಶಿಷ್ಟವಾದ ಸಲಹೆ. ಅದನ್ನೂ ಕೂಡ ಸಮಿತಿಯವರು ಪರ್ಯಾಲೋಚನೆ ಮಾಡಬಹುದು.

ಆ ಮೇಲೆ ಭೂಮಿಯ ವರ್ಗೀಕರಣವನ್ನು ಕಾನೂನಿನಲ್ಲಿ ೭ ವಿಧವಾಗಿ ವಿಂಗಡಿಸಿದೆ. ಅದನ್ನು ಪುನರಾಲೋಚನೆ ಮಾಡಬೇಕೆಂದು ಕೆಲವು ಸದಸ್ಯರು ಸೂಚನೆಗಳನ್ನು ಮಾಡಿದ್ದಾರೆ. ಈಗ ಖುಷ್ಕಿ ಜಮೀನನ್ನು ವಿಂಗಡಣೆ ಮಾಡುವಾಗ ಎಲ್ಲಿ ಎಷ್ಟು ಮಳೆ ಬರುತ್ತದೆ ಎಂಬುದನ್ನು ನೋಡಿಕೊಂಡು ಭೂಮಿಯ ಗುಣವನ್ನು ನಿರ್ಧಾರ ಮಾಡಿದ್ದಾರೆ. ಇದಕ್ಕಿಂತ ಉತ್ತಮವಾದ ಆಧಾರಗಳೇನಿವೆ ಎಂಬುದನ್ನು ನೋಡಿ ಅದನ್ನು ಪುನರಾಲೋಚನೆ ಮಾಡಬಹುದು.

5-00P.M

ಆ ಮೇಲೆ ಶ್ರೀಮಾನ್ ಶಾಮಣ್ಣನವರು ಅಡಿಕೆ ತೋಟವನ್ನು ಯಾವ ರೀತಿ ವರ್ಗೀಕರಣ ಮಾಡುತ್ತೀರಿ ಎಂದು ಕೇಳಿದ್ದಾರೆ. ಅದನ್ನು ಸ್ವಲ್ಪ ಯೋಚನೆ ಮಾಡಬೇಕಾಗಿದೆ. ತೆಂಗು ಮಳೆಯಿಂದಲೂ ಬೆಳೆಯುತ್ತದೆ. ನೀರಾವರಿಯಿಂದಲೂ ಬೆಳೆಯುತ್ತದೆ। ಅದನ್ನು ಕೂಡ ಯೋಚನೆ ಮಾಡುವುದರ ಜೊತೆಗೆ ಅಡಿಕೆಯು ನಿರಾವರಿ ಸೌಲಭ್ಯ ಇಲ್ಲದೆ ಬೆಳೆಯುತಕ್ಕ ವರ್ಗವಲ್ಲ ವಾದುದರಿಂದ ಅದನ್ನು ಸಹ ಯಾವ ವರ್ಗಕ್ಕೆ ಸೇರಿಸಬೇಕೆಂಬುದನ್ನು ಕೂಡ ಸಮಿತಿಯವರು ಆಲೋಚನೆ ಮಾಡ ಬಹುದು. ಇನ್ನು ಕೆಲವರು ಆಹಾರ ಉತ್ಪತ್ತಿಯ ಮೇಲೆ ಈ ಭೂಸುಧಾರಣೆಯನ್ನು ಜಾರಿಗೆ ತರುವುದರಿಂದ ಪರಿಣಾಮ ಆಗುವುದಿಲ್ಲವೇ. ಮತ್ತು ಇದರಿಂದ ಇನ್ನೂ ಕಡಿಮೆಯಾಗುವುದಕ್ಕೆ ಅವಕಾಶವಾಗುತ್ತದೆ ಎಂದು ಹೇಳಿದರು. ಮಾನ್ಯ ಕೆಂಚೇಗೌಡರು, ಮತ್ತು ಶಾಮಣ್ಣನವರು ಇದರ ಬಗ್ಗೆ ಸಲಹೆ ಯನ್ನು ಕೊಟ್ಟಿದ್ದಾರೆ. ಮಾನ್ಯ ಕೆಂಚೇಗೌಡರ ವಾದವನ್ನು ಇಲ್ಲಿ ಕೂತು ಕೇಳುವುದಕ್ಕೆ ನನಗೆ ಅವಕಾಶವಾಗದಿದ್ದರೂ, ಅವರ ವಾದವನ್ನು ನಾನು ಓದಿ ತಿಳಿದಿದ್ದೇನೆ.

ನನ್ನ ಅಭಿಪ್ರಾಯದಲ್ಲಿ ೪೦ ಎಕರೆಗಿಂತ ಹೆಚ್ಚು ಭೂಮಿ ಇದ್ದವರು ಸಂಖ್ಯೆಯನ್ನು ೧೯೬೧ನೇ ಇಸವಿಯಲ್ಲಿ ಸಂಗ್ರಹಿಸಿದ್ದಾರೆ. ಅದರ ಪ್ರಕಾರ ೨೫ ಲಕ್ಷ ಹಿಡುವಳಿದಾರರು ಇದ್ದರು. ಆದರೆ ಈ ಭೂಸುಧಾರಣೆ ಜಾರಿಗೆ ಬರುತ್ತದೆ ಎಂದು ಜನರು ಗಾಬರಿಪಟ್ಟುಕೊಂಡು ಈ ಸಂಖ್ಯೆ ಮೇಲಕ್ಕೆ ಹೋಗುವಂತೆ ಆಯಿತು. ಅಂದರೆ ೨೫ ಲಕ್ಷ ಇದ್ದದ್ದು ೪೫ ಲಕ್ಷದ ೭೨ ಸಾವಿರಕ್ಕೆ ಹೊರಟು ಹೋಯಿತು. ಅಂದರೆ ೨೫ ಲಕ್ಷದಿಂದ ಈ ಸಂಖ್ಯೆ ೪೫ ಲಕ್ಷಕ್ಕೆ ಏರಿದಾಗ ಇದು ಶೇಕಡಾ ಒಂದು ಕೂಡ ಆಗುವುದಿಲ್ಲ. ಆದ್ದರಿಂದ ಶೇಕಡಾ ಒಂದು ಪ್ರಮಾಣದಲ್ಲಿರುವವರ ಬಗ್ಗೆ ಇಷ್ಟು ವಾದ ಮಾಡುವುದು ಸರಿಯಲ್ಲ. ಭೂಮಾಲೀಕರ ಹಿಡುವಳಿಯನ್ನು ಕಡಿಮೆ ಮಾಡಿದರೆ ಅದರಿಂದ ಆಹಾರದ ಉತ್ಪತ್ತಿ ಕಡಿಮೆಯಾಗಿ ದೇಶಕ್ಕೆ ಕ್ಷಾಮ ಬರುತ್ತದೆ, ಒಂದು ಭೀಕರ ಪರಿಸ್ಥಿತಿ ಬರುತ್ತದೆ ಎಂದು ಹೇಳುವುದು ಸರಿಯಲ್ಲ. ನನ್ನ ಅಭಿಪ್ರಾಯದಲ್ಲಿ ಭೂಮಾಲೀಕರಿಗೆ ಸಾವಿರಾರು ಎಕರೆ ಇರುವಾಗ ಎಕರೆ ಒಂದರಲ್ಲಿ ಎಷ್ಟು ಉತ್ಪತ್ತಿ ಪಡೆಯುತ್ತಾರೆ, ಅದಕ್ಕಿಂತ ಹೆಚ್ಚು ಉತ್ಪತ್ತಿ ಅವರಲ್ಲಿ ಕಡಿಮೆ ಎಕರೆ ಇದ್ದರೆ ಪಡೆಯುವುದಕ್ಕೆ ಸಾಧ್ಯವಾಗುತ್ತದೆ. ಏಕೆಂದರೆ ಭೂಮಿ ದೊಡ್ಡದು ಆಗುತ್ತಾ ಆಗುತ್ತಾ ಅವನು ಇತರರನ್ನು ಅವಲಂಬಿಸದೆ ಅದರಲ್ಲಿ ಸಾಗುವಳಿ ಮಾಡುವುದಕ್ಕಾಗುವುದಿಲ್ಲ. ನೀರಾವರಿ ಜಾಸ್ತಿಯಾದರೂ ಸಹ ಒಬ್ಬ ಮಾನ್ಯ ಸದಸ್ಯರು ಹೇಳಿದ ಹಾಗೆ ಅವನಿಗೆ ಸ್ವಂತ ಸಾಗುವಳಿ ಮಾಡುವುದಕ್ಕೆ ಕಷ್ಟವಾಗುತ್ತದೆ ಅಥವಾ ಅವನು ಯಂತ್ರವನ್ನು ಅವಲಂಬಿಸಿಕೊಂಡಿರಬೇಕಾಗುತ್ತದೆ. ದೊಡ್ಡ ದೊಡ್ಡ ಭೂಮಾಲೀಕರು ಉಪಯೋಗಿಸಿಕೊಳ್ಳ ಬಹುದಾದಂತಹ ಯಂತ್ರಗಳೂ ಇವೆ ಸಣ್ಣ ಸಣ್ಣ ಭೂಮಾಲೀಕರು ಉಪಯೋಗಿಸಿಕೊಳ್ಳಬಹುದಾದಂತಹ ಯಂತ್ರಗಳೂ ಇವತ್ತು ದೇಶದಲ್ಲಿ ಇವೆ. ಅದಲ್ಲದೆ ೧-೨-೩-೨೦ ಜನರು ಒಟ್ಟಿಗೆ ಸೇರಿ ಯಂತ್ರವನ್ನು ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶ ಇದೆ. ಆದ್ದರಿಂದ ಹೆಚ್ಚು ಜನರು ಕೈಗೆ ಇಂತಹ ಭೂಮಿ ಸಿಕ್ಕಿ ಹೆಚ್ಚಿನ ಸಂಪನ್ಮೂಲಗಳನ್ನು ಗಳಿಸುವುದಕ್ಕೆ ಸಾಧ್ಯವಾಗುತ್ತದೆ. ಒಬ್ಬ ಮಾನ್ಯ ಸದಸ್ಯರು ಏನೂ ಇಲ್ಲದವರಿಗೆ ಒಂದು ಊಟವನ್ನಾದರೂ ಒದಗಿಸುವುದಕ್ಕೆ ನಾವು ಏರ್ಪಾಡು ಮಾಡಬೇಕೆಂದು ಹೇಳಿದರು. ಆದ್ದರಿಂದ ನಾವು ಅಷ್ಟನ್ನಾದರೂ ಮಾಡಬೇಕಾಗಿದೆ. ಆ ದೃಷ್ಟಿಯಲ್ಲಿ ಮಾನ್ಯ ಕೆಂಚೇಗೌಡರು ಏನು ಹೇಳಿದರು ಅದರಂತೆ ಆಗುವುದಿಲ್ಲ.

ಶ್ರೀ ಡಿ ದೇವರಾಜ ಅರಸ್.—ಅವರು ಹೇಳುವುದು—ನಮ್ಮ ಹತ್ತಿರ ಇದ್ದುದನ್ನು ಮಾತ್ರ ಮುಟ್ಟಕೂಡದು. ಬಾಕಿ ಭೂಮಿಯ ಬಗ್ಗೆ ಏನಾದರೂ ಮಾಡಿಕೊಳ್ಳಿ ಎಂದು.

ಶ್ರೀ ಎನ್ ಹುಚ್ಚಮಾಸ್ತಿಗೌಡ.— ಇವತ್ತು ಅವರು ೮೦ ಲಕ್ಷ ಜನರಿಗೆ ಇರತಕ್ಕಂತಹ ೩-೪ ಲಕ್ಷ ಎಕರೆ ಭೂಮಿಯನ್ನು ಹೇಗೆ ಹಂಚುತ್ತೀರೆಂದು ಕೇಳುತ್ತಾರೆ. ನಾವು ನಮ್ಮ ಹತ್ತಿರ ಇರತಕ್ಕಂತಹ ಭೂಮಿಯನ್ನು ೮೦ ಲಕ್ಷ ಜನರಿಗೂ ಹಂಚಬೇಕೆನ್ನುವ ಕಾರ್ಯಕ್ರಮವನ್ನು ಇಟ್ಟುಕೊಂಡಿಲ್ಲ. ಇದರಲ್ಲಿ ಕಡೆಯ ಪಕ್ಷ ಒಬ್ಬನಿಗೆ ಒಂದು ಎಕರೆ ಭೂಮಿ ಸಿಕ್ಕಿದರೂ ಸಾಕು. ಇದನ್ನು ನೋಡಿಕೊಂಡು ಒಬ್ಬನಿಗೆ ಎಷ್ಟು ಕೊಡಬೇಕೆಂಬುದನ್ನು ನಿರ್ಧಾರ ಮಾಡುತ್ತೇವೆ. ಅಲ್ಲದೆ ೮೦ ಲಕ್ಷ ಜನರಿಗೂ ಎರಡು ಗುಂಟೆಯಂತೆ ಹಂಚುವುದಿಲ್ಲ. ಆದ್ದರಿಂದ ಮಾನ್ಯ ಕೆಂಚೇಗೌಡರು ಇದರ ಬಗ್ಗೆ ಹೆದರಿಕೆ ಇಟ್ಟುಕೊಳ್ಳುವ ಅವಶ್ಯಕತೆ ಇಲ್ಲ.

ಆ ಮೇಲೆ ಧಾರ್ಮಿಕ ಸಂಸ್ಥೆಗಳಿಗೆ ವಿದ್ಯಾ ಸಂಸ್ಥೆಗಳಿಗೆ ವಿನಾಯಿತಿ ಕೊಡಬೇಕೆಂದು ಹೇಳಿದ್ದಾರೆ. ಹಾಗೆಯೇ ವಿನಾಯಿತಿ ಕೊಡಬಾರದು ಎನ್ನುವ ಅಭಿಪ್ರಾಯ ಕೆಲವರದ್ದು. ಈ ಧಾರ್ಮಿಕ ಸಂಸ್ಥೆಗಳಲ್ಲಿ ಸ್ವ ವ್ಯವಸಾಯ ಮಾಡುವವರು ಯಾರೂ ಇಲ್ಲ. ಇವತ್ತು ಗೇಣಿಗೆ ಮಾಡತಕ್ಕವನಿಗೆ ಭೂಮಿ ಸಲ್ಲಬೇಕು. ಅಷ್ಟು ಮಿತಿಯನ್ನು ಅರಿವಗೂ ಹಾಕಿ, ಉಳಿದ ಜಮೀನನ್ನು ಅವರಿಂದ ತೆಗೆದುಕೊಳ್ಳುತ್ತೇವೆ. ಹಾಗೆ ಜಮೀನು ತೆಗೆದುಕೊಂಡಾಗ ಎಷ್ಟು ಗೇಣಿಗೆ ಸಿಗುತ್ತದೆ ಅದನು ವರ್ಷೇ ವರ್ಷೆ ತಸದೀಕ್ ರೂಪದಲ್ಲಿ ಅವರಿಗೆ ಕೊಡುತ್ತೇವೆ.

ಶ್ರೀ ಕೋಣಂದೂರು ಲಿಂಗಪ್ಪ.—ಶಿಕ್ಷಣ ಸಂಸ್ಥೆಯ ಬಗ್ಗೆ ತಾವು ವಿಚಾರ ಮಾಡಬಹುದು ಎಂದು ಕಾಣುತ್ತದೆ. ಉದಾಹರಣೆಗೆ ಮಾನ್ಯ ಘೋರ್ಪಡೆಯವರಿಗೆ ಅನೇಕ ಸಂಸ್ಥೆಗಳು ಇವೆ.

ಶ್ರೀ ಎನ್ ಹುಚ್ಚಮಾಸ್ತಿಗೌಡ.— ಶ್ರೀಮಾನ್ ಘೋರ್ಪಡೆಯವರ ಕೈಯಲ್ಲಿ ಇದ್ದರೂ ಅಷ್ಟೆ. ಮುಖ್ಯಮಂತ್ರಿಯವರ ಕೈಯಲ್ಲಿ ಇದ್ದರೂ ಅಷ್ಟೆ. ಆದ್ದರಿಂದ ಮಾನ್ಯ ಘೋರ್ಪಡೆಯವರಿಗೆ ಏನಾದರೂ ಇದರಲ್ಲಿ ವಿನಾಯಿತಿ ಬಂದರೆ, ಬಾಕಿ ಉಳಿದ ಸಂಸ್ಥೆಗಳಿಗೂ ಬರುತ್ತದೆ. ವಿನಾಯಿತಿ ಕೊಡುವಾಗ ಎಲ್ಲರಿಗೂ ಒಂದೇ ರೀತಿಯಲ್ಲಿ ಕೊಡುತ್ತೇವೆ. ಅವರಿಗೋಸ್ಕರವಾಗಿ ವಿನಾಯಿತಿಯನ್ನು ಕೊಡುವುದಿಲ್ಲ. ನನ್ನ ಅಭಿಪ್ರಾಯದಲ್ಲಿ ವಿನಾಯಿತಿ ಕೊಡುವುದು ಸೂಕ್ತವಲ್ಲವೆಂದು ಕಾಣುತ್ತದೆ.

ಆ ಮೇಲೆ ಈಗಾಗಲೇ ಕೆಲವರು ಈ ಭೂಮಿಯ ಪರಿಹಾರದ ಬಗ್ಗೆ ಗೇಣಿಯ ೫ ರಷ್ಟಕ್ಕಿಂತ, ಕಂದಾಯದ ೫ ರಷ್ಟಕ್ಕಿಂತ ಹೆಚ್ಚು ಇರಬಾರದು ಎಂದು ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಕೆಲವರು ೧೦ ರಷ್ಟು ಇರಬೇಕಾದ್ದು ಸರಿ ಎಂದು ಹೇಳಿದ್ದಾರೆ. ಕೆಲವರು ೨೦ ರಷ್ಟು ಇರಬೇಕೆಂದು ಅಭಿಪ್ರಾಯ ಕೊಟ್ಟಿದ್ದಾರೆ. ಆದ್ದರಿಂದ ಈ ಮಸೂದೆ ಸೆಲೆಕ್ಟ್ ಕಮಿಟಿಗೆ ಹೋದಾಗ ಅಲ್ಲಿ ಅದನ್ನು ಪರ್ಯಾಲೋಚನೆ ಮಾಡಿ ಅವರಿಗೆ ಇಷ್ಟೆ ಕೊಡುವುದು ನ್ಯಾಯ ಎಂದು ನಿರ್ಧರಿಸುವುದಕ್ಕೆ ಅವಕಾಶ ಇದೆ.

ಶ್ರೀಮಾನ್ ಕಕ್ಕಿಲ್ಲಾಯ ಅವರು ಗೇಣಿದಾರರನ್ನು ಹೊರಗೆ ಹಾಕುವಂಥಾದ್ದು ಅನೇಕ ಕೇಸುಗಳು ಕಂಡುಬರುತ್ತಿವೆ ಎಂದು ಕಳೆದ ಅಧಿವೇಶನದಲ್ಲಿ ಹೇಳಿದ್ದರು. ಆದರೆ ಇತ್ತೀಚೆಗೆ ಗೇಣಿಯ ಬಾಕಿಯನ್ನು ಕಂತಿನಮೇಲೆ ಕೊಡಬೇಕೆಂದು ಸುಗ್ರೀವಾಜ್ಞೆಯು ಆಗಿರುವುದರಿಂದ ಗೇಣಿ ಬಾಕಿಯನ್ನು ಕಂತುಕೊಡುವುದರಲ್ಲಾಗಲೀ, ಗೇಣಿಯನ್ನು ಕೊಡುವುದರಲ್ಲಾಗಲೀ ಗೇಣಿದಾರನನ್ನು ಹೊರಗೆ ಹಾಕತಕ್ಕದ್ದಲ್ಲ. ಅದು ನಿಂತುಹೋಗಿದೆ.

ಸಕ್ಕರೆ ಕಾರ್ಖಾನೆಗೆ ಮಾತ್ರ ೧೦೦ ಎಕರೆ ಮಿತಿ ಏತಕ್ಕೆ ಇರಬೇಕು ಎಂದು ಕೆಲವು ಮಾನ್ಯ ಸದಸ್ಯರು ಹೇಳಿದ್ದಾರೆ. ಇದರ ಉದ್ದೇಶ ಏನೆಂದರೆ ನಾನಾಜಾತಿಯ ಕಬ್ಬು ಇರುವುದರಿಂದ ಕೆಲವು ವೇಳೆ ಪ್ರಯೋಗ ಮಾಡಿ ಯಾವ ಕಬ್ಬಿನಿಂದ ಉತ್ಪತ್ತಿ ಚೆನ್ನಾಗಿ ಬರುತ್ತದೆ, ಇಳುವರಿ ಚೆನ್ನಾಗಿ ಬರುತ್ತದೆ ಎನ್ನುವುದನ್ನು ಕಂಡುಹಿಡಿಯಲು ಎಕ್ಸ್‌ಪರಿಮೆಂಟಲ್ ಫಾರಮ್‌ಗೋಸ್ಕರ ಸಕ್ಕರೆ ಕಾರ್ಖಾನೆಗೆ ೧೦೦ ಎಕರೆ ಮಿತಿಯನ್ನು ಇಟ್ಟಿದೆಯೇ ಹೊರತು ಮತ್ತಾವ ದೃಷ್ಟಿಯಿಂದಲೂ ಅಲ್ಲ. ಮಂಡ್ಯ ಸಕ್ಕರೆ ಕಾರ್ಖಾನೆ ಅಥವಾ ಪಾಂಡವಪುರ ಸಕ್ಕರೆ ಕಾರ್ಖಾನೆಯನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಈ ರೀತಿ ಮಾಡಿದ್ದಾರೆ ಎಂದು ಹೇಳುವುದು ಸರಿಯಲ್ಲ.

ಶ್ರೀಮಾನ್ ಕಕ್ಕಿಲಾಯ ಅವರು ಮತ್ತು ಇನ್ನು ಕೆಲವು ಮಾನ್ಯ ಸದಸ್ಯರು ಪ್ಲಾನ್‌ಟೇಷನ್‌ಗಳಿಗೆ ಏತಕ್ಕೆ ವಿನಾಯ್ತಿ ಕೊಡಬೇಕೆಂದು ಹೇಳಿದ್ದಾರೆ. ಮಾನ್ಯಸದಸ್ಯರಿಗೆ ಗೊತ್ತಿರುವ ಹಾಗೆ ಇದಕ್ಕೆ ವಿನಾಯ್ತಿ ಕೊಟ್ಟಿರುವ ಉದ್ದೇಶ ಇದು ಒಂದು ಕೈಗಾರಿಕೆ ಇದ್ದಹಾಗೆ ಇದೆ. ಆದ್ದರಿಂದ ಇದನ್ನು ಪ್ರತ್ಯೇಕವಾಗಿ ಆಲೋಚನೆ ಮಾಡುವುದು ಅಗತ್ಯ ಎಂದು ತಿಳಿಸಿದ್ದೇವೆ. ಅದನ್ನು ಈ ಮಸೂದಾ ಕಾನೂನಿನಲ್ಲಿ ಸೇರಿಸಿಲ್ಲ.

ಕೆಲವು ಮಾನ್ಯ ಸದಸ್ಯರು ಅಭಾವ ಇರತಕ್ಕ ಪ್ರದೇಶಗಳಲ್ಲಿ ತೀರಾ ಕಡಿಮೆ ಮಳೆ ಬೀಳತಕ್ಕ ಪ್ರದೇಶದಲ್ಲಿ ೫೪ ಎಕರೆ ಮಿತಿಯನ್ನು ೧೦೦ ಎಕರೆಗೆ ಏರಿಸಿ ಎಂದು ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಅದನ್ನು ೧೦೦ ಎಕರೆಗೆ ಏರಿಸುವುದಕ್ಕೆ ಸಾಧ್ಯವಿಲ್ಲ. ಇದರಲ್ಲಿ ಚೌಕಾಸಿ ಮಾಡಿ ೫೪ ಎಕರೆಗಿಂತ ೪-೫ ಎಕರೆ ಹೆಚ್ಚು ಮಾಡಿದರೂ ಕೂಡ ಈ ಬಗ್ಗೆ ಕೇಂದ್ರ ಸರಕಾರದವರ ಒಪ್ಪಿಗೆ ಇಲ್ಲದೆ ಶಾಸನ ಮಾಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಆ ಬಗ್ಗೆ ಕೇಂದ್ರ ಸರ್ಕಾರದವರು ಎಷ್ಟರ ಮಟ್ಟಿಗೆ ಒಪ್ಪಿಗೆ ಕೊಡುತ್ತಾರೆ ಎನ್ನುವುದು ಅವರಿಗೆ ಇರತಕ್ಕ ವಿಷಯ.

ಗೇಣಿದಾರ ಪಡೆದ ಜಮೀನನ್ನಾಗಲೀ ಜಮೀನ್ದಾರ ವಾಪಸು ಪಡೆದ ಜಮೀನನ್ನು ಆಗಲಿ ಪರಭಾರೆ ಮಾಡುವ ವಿಷಯದಲ್ಲಿ ಹಿಂದಿನ ಕಾನೂನಿನಲ್ಲಿ ೬ ವರ್ಷಗಳ ಮಿತಿ ಇತ್ತು. ಈಗ ಅದನ್ನು ಖಾಯಂ ಆಗಿ ಭೂಮಿಯನ್ನು ಮಾರಲೇ ಕೂಡದು ಎಂದು ನಿಷೇಧ ಹಾಕಿಹದ್ದರಿಂದ ಶ್ರೀಮಾನ್ ಪುಟ್ಟಸ್ವಾಮಯ್ಯನವರು ಹೇಳಿದರು. ಅದನ್ನು ಸೆಲೆಕ್ಟ್ ಕಮಿಟಿಯವರು ಯೋಚನೆ ಮಾಡಬೇಕು.

ಶ್ರೀ ಟಿ. ಆರ್. ಶಾಮಣ್ಣ.—ಸಣ್ಣಹಿಡುವಳಿದಾರರಿಗೆ ಅನುಕಂಪವನ್ನು ತೋರಿಸುತ್ತೀರಾ ?

ಶ್ರೀ ಎನ್ ಹುಚ್ಚಮಾಸ್ತಿಗೌಡ.—ಶ್ರೀಮಾನ್ ಶಾಮಣ್ಣನವರು ಬಹಳ ಎಚ್ಚರಿಕೆಯಿಂದ ಇದನ್ನು ಪ್ರಸ್ತಾಪ ಮಾಡುತ್ತಾ ಬಂದಿದ್ದಾರೆ. ಈಗಿರತಕ್ಕ ಮಸೂದಾ ಕಾನೂನಿನಲ್ಲಿ ಸಣ್ಣ ಹಿಡುವಳಿದಾರರಿಗೆ ಸ್ವಲ್ಪಮಟ್ಟಿಗೆ ವಿನಾಯ್ತಿ ಇದೆ. ಇನ್ನೂ ಹೆಚ್ಚು ವಿನಾಯ್ತಿ ಕೊಡಬೇಕೆಂದರೆ ಇದು ಸಮಿತಿಯ ಮುಂದೆ ಹೋದಾಗ ಅಲ್ಲಿ ಇದನ್ನು ಪರಿಶೀಲನೆ ಮಾಡಬಹುದು.

ಇಷ್ಟು ವಿಷಯಗಳನ್ನು ತಿಳಿಸಿ ಈಗ ಇದು ಇಷ್ಟಕ್ಕೇ ಬಗೆಹರಿಯುವುದಿಲ್ಲವೆನ್ನುವ ಪರಿಸ್ಥಿತಿ ಬಂದಿದೆ. ಆದ್ದರಿಂದ ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸದೆ ಇಲ್ಲೇ ಇದನ್ನು ತೀರ್ಮಾನ ಮಾಡುವುದಕ್ಕೆ ಕಷ್ಟ ಎಂದು ತಿಳಿದು ಬಂದಿದೆ. ಮತ್ತು ಕೆಲವುಮಾನ್ಯ ಸದಸ್ಯರು ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಿ ಅಲ್ಲಿ ಕೂಲಂಕುಷವಾಗಿ ಚರ್ಚೆ ಮಾಡಿ ಒಂದು ತೀರ್ಮಾನಕ್ಕೆ ಬರುವುದು ಒಳ್ಳೆಯದು ಎಂದು ಹೇಳಿದ್ದರಿಂದ ಅವರ ಅಭಿಪ್ರಾಯಕ್ಕೆ ಮನ್ನಣೆ ಕೊಡಬೇಕೆಂದು ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ರೆಫರ್ ಮಾಡಬೇಕೆಂದು ಅಭಿಪ್ರಾಯ ಇದೆ. ಆದ್ದರಿಂದ ನಾನು ಹೇಳತಕ್ಕ ೧೫ ಜನ ಈ ಮಾನ್ಯ ಸಭೆಯ ಸದಸ್ಯರನ್ನು ಒಳಗೊಂಡ ಸಮಿತಿಗೆ ಇದನ್ನು ಕಳುಹಿಸಬೇಕೆಂದು ನಾನು ಹೇಳುತ್ತೇನೆ. ಅದಕ್ಕಾಗಿ ನಾನು ಈ ನಿರ್ಣಯವನ್ನು ಈ ಸಭೆಯಮುಂದೆ ಮಂಡಿಸುತ್ತೇನೆ.

MR. DEPUTY SPEAKER :— The question is ;

"That the Mysore Land Reforms (Amendment) Bill, 1972 be taken into consideration."

The Motion was adopted.